# ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ



## ನಾಗರಿಕ ಸಂಘ ಸಂಸ್ಥೆಗಳಿಗಾಗಿ ಕೈಪಿಡಿ

ಪಿ.ಪಿ.ಬಾಬುರಾಜ್

ಪ್ರಕಾಶಕರು :
ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ILO)
ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ
(CACL)– ಕರ್ನಾಟಕ.

# ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ

ನಾಗರಿಕ ಸಂಘ ಸಂಸ್ಥೆಗಳ ಕೈಪಿಡಿ

ಸಂಜೀವ್ ಕುಮಾರ್, ಭಾ.ಆ.ಸೇ.

ಪಿ. ಪಿ. ಬಾಬುರಾಜ್

ಕೆ. ರಾಘವೇಂದ್ರ ಭಟ್

ಪ್ರಕಾಶಕರು

ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಓ)

ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ (ಸಿಎಸಿಎಲ್) – ಕರ್ನಾಟಕ

*Balakarmika Paddati Nirmulane - Nagarika Sangha Samsthegala Kaipidi. A hand book on elimination of child labour for the civil society organisations. Published by International Labour Organisation (ILO) and Campaign Against Child Labour (CACL) Karnataka.*

ಮೊದಲ ಆವೃತ್ತಿ : ಏಪ್ರಿಲ್ 2010

ಪ್ರತಿಗಳು : 1000

ಪುಟ : 60

ಸಲಹಾ ಮಂಡಳಿ : ಸಂಜೀವ್ ಕುಮಾರ್, ಪಿ. ಪಿ. ಬಾಬುರಾಜ್, ಡಾ॥ ಮಹೇಂದ್ರ, ಪ್ರಕಾಶ್ ಕಾಮತ್, ಕೆ. ರಾಘವೇಂದ್ರ ಭಟ್, ಲಾಸ್ಯ ಗೋಪಾಲ್

ಹಕ್ಕುಗಳು : ಕಾದಿರಿಸಲಾಗಿಲ್ಲ, ಈ ಪುಸ್ತಕದ ಯಾವುದೇ ಮಾಹಿತಿ ಬಳಸುವಾಗ ಈ ಪುಸ್ತಕದ ಹೆಸರು ಬಳಸಲು ಕೋರಲಾಗಿದೆ.

ಮುಖಪುಟ ಮತ್ತು ರೇಖಾಚಿತ್ರ : ಗೋಪಾಡ್ಕರ್, ಸ್ವರೂಪ ಶಿಕ್ಷಣ ಕೇಂದ್ರ, ಮಂಗಳೂರು.

**ಪ್ರಕಟಣೆ : ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ–ಕರ್ನಾಟಕ** (ಸಿಎಸಿಎಲ್–ಕೆ) ರಾಜ್ಯ ಸಂಯೋಜನಾ ಕಾರ್ಯಾಲಯ, ಬೆಳಗಾಂ.

**ಐಎಲ್ಓ–ಐಪೆಕ್–ಕರ್ನಾಟಕ ಚೈಲ್ಡ್ ಲೇಬರ್ ಪ್ರೊಜೆಕ್ಟ್** (ಕೆಸಿಎಲ್‌ಪಿ)
5ಎ, 5ನೇ ಬ್ಲಾಕ್, ಎಮ್‌ಸಿಹೆಚ್‌ಎಸ್, ಹೆಚ್‌ಎಸ್‌ಆರ್ ಬಡಾವಣೆ,
ಸೆಕ್ಟರ್–6, ಬೆಂಗಳೂರು – 560 034.
ದೂ. : 080–65605744 ಫ್ಯಾಕ್ಸ್ : 080–25729106
ಇ–ಮೇಲ್ : sanjiv@ilodel.org.in

**ಕಮ್ಯೂನಿಟಿ ಡೆವಲಪ್‌ಮೆಂಟ್ ಫೌಂಡೇಶನ್** (ಸಿಡಿಎಫ್)
ನಂ. 29/3, 1ನೇ ಮಹಡಿ, ತುಳಸಿರಾಮದಾಸ್ ಮಠ ರಸ್ತೆ,
ಫ್ರೇಜರ್ ಟೌನ್, ಬೆಂಗಳೂರು – 560 005.
ದೂ. : 080–25464790 ಇ–ಮೇಲ್ : cdfbangalore@gmail.com

ಪರಿಕಲ್ಪನೆ, ವಿನ್ಯಾಸ ಮತ್ತು ಸಂಯೋಜನೆ : ಸಿಡಿಎಫ್ ಬಳಗ

ಡಿಟಿಪಿ ಮತ್ತು ಪ್ರಿಂಟಿಂಗ್ : ಗೆಲಾಕ್ಸಿ ಗ್ರಾಫಿಕ್ಸ್, ದಾವಣಗೆರೆ.

ಒಳಪುಟಗಳಲ್ಲಿ


| | |
|---|---|
| ಮುನ್ನುಡಿ | 05 |
| ಉದ್ದೇಶಗಳು | 06 |
| ಬಾಲಕಾರ್ಮಿಕ ಪದ್ಧತಿ : ಅರ್ಥ ಮತ್ತು ವ್ಯಾಪ್ತಿ | 12 |
| ಮಿಥ್ಯೆಗಳು ಮತ್ತು ವಾಸ್ತವಾಂಶಗಳು | 16 |
| ಶಿಕ್ಷಣ ಮತ್ತು ಬಾಲಕಾರ್ಮಿಕ ಪದ್ಧತಿ : ಸರ್ಕಾರದ ಯೋಜನೆಗಳು | 20 |
| ನಾಗರಿಕ ಸಂಘ ಸಂಸ್ಥೆಗಳ ಪಾತ್ರ ಮತ್ತು ಜವಾಬ್ದಾರಿ | 25 |
| ಕೆಲವು ಮುಖ್ಯ ಸಂಪರ್ಕಗಳು | 30 |
| ಅಕರಗಳು ಮತ್ತು ಸಂಪನ್ಮೂಲಗಳು | 35 |

# ಮುನ್ನುಡಿ

ಮುನ್ನುಡಿ

ಶುಭಾಶಯ ನುಡಿ

ಶುಭಾಶಯ ನುಡಿ



## ಉದ್ದೇಶ

ರಾಜ್ಯದ ಹಲವೆಡೆ ಅಲ್ಲಲ್ಲಿ ನಾಗರಿಕ ಸಂಘ ಸಂಸ್ಥೆಗಳೊಂದಿಗೆ ಕಾರ್ಯಾಗಾರಗಳು, ವಿಚಾರ ಸಂಕಿರಣಗಳು ಮತ್ತು ಸಭೆಗಳನ್ನು ನಡೆಸುವ ಸಂದರ್ಭಗಳಲ್ಲಿ ಬಾಲಕಾರ್ಮಿಕ ಪದ್ಧತಿ ಕುರಿತ ಕೈಪಿಡಿಯೊಂದರ ಅಗತ್ಯವನ್ನು ಮನಗಾಣಲಾಯಿತು. ರಾಜ್ಯದ ವಿವಿಧೆಡೆ ಬಾಲಕಾರ್ಮಿಕ ಪದ್ಧತಿ ಕುರಿತು ಕಾಳಜಿ ಇರುವಂತಹ ಅನೇಕ ನಾಗರಿಕ ಸಂಘ ಸಂಸ್ಥೆಗಳಿವೆ. ಅವು ತಮ್ಮ ಸಂಘ ಸಂಸ್ಥೆಗಳೊಳಗೆ ಮತ್ತು ತಮ್ಮ ಸುತ್ತಮುತ್ತಲಿನ ಸ್ಥಳೀಯ ವ್ಯಾಪ್ತಿಯಲ್ಲಿ ಮಕ್ಕಳ ದುಡಿಮೆಯನ್ನು ಸಂಪೂರ್ಣವಾಗಿ ತಡೆಗಟ್ಟಬಲ್ಲವು. ಮಾತ್ರವಲ್ಲದೆ ಮಕ್ಕಳ ನಿರಂತರ ಶಾಲಾ ಹಾಜರಾತಿಯೆಡೆಗೆ ಕೂಡ ಅವು ನಿಗಾ ವಹಿಸಬಲ್ಲವು. ಬಾಲಕಾರ್ಮಿಕ ಪದ್ಧತಿಗೆ ಸಂಬಂಧಿಸಿದ ವಿಚಾರಗಳು, ಕಾನೂನುಗಳು, ಯೋಜನೆಗಳು, ಪುನರ್ವಸತಿ ವ್ಯವಸ್ಥೆಗಳು, ಸಂಪರ್ಕಿಸಬಹುದಾದ

ವ್ಯಕ್ತಿಗಳು ಮತ್ತು ಸಂಘಸಂಸ್ಥೆಗಳ ವಿವರ ಒಂದೆಡೆ ಲಭ್ಯವಾದರೆ ಅವು ಇಂತಹ ಸಂಘ ಸಂಸ್ಥೆಗಳಿಗೆ ನೆರವಾಗುತ್ತವೆ. ಇಂತಹ ಸಂಘ ಸಂಸ್ಥೆಗಳನ್ನು ಈ ನಿಟ್ಟಿನಲ್ಲಿ ಬಲಪಡಿಸುವತ್ತ ಇಂತಹದೊಂದು ಕೈಪಿಡಿಯು ಪೂರಕವಾದ ಕೊಡುಗೆಯಾಗುತ್ತದೆ. ಸ್ಥಳೀಯ ಶಾಲೆಗಳಲ್ಲಿ, ಸಮುದಾಯ ಗುಂಪುಗಳಲ್ಲಿ, ಸಭೆ ಸಮಾರಂಭಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವ ಸದಸ್ಯರಿಗೆ ಈ ಕೈಪಿಡಿ ನೆರವಾಗಬಹುದು. ಬಾಲಕಾರ್ಮಿಕ ಪದ್ಧತಿ ವಿರುದ್ಧದ ಚಟುವಟಿಕೆಗಳಿಗೆ ನೆರವಾಗಬಲ್ಲ ಒಂದು ಕಿರುಹೊತ್ತಿಗೆ ಇದು ಎಂಬುದು ಇದರ ಪರಿಕಲ್ಪನೆ. ಈ ಹಿನ್ನೆಲೆಯಲ್ಲಿ ಕೈಪಿಡಿಯನ್ನು ಸಿದ್ಧಪಡಿಸಲಾಗಿದೆ.

ಸುಮಾರು 10 ಕೋಟಿ ಮಕ್ಕಳು ಇನ್ನೂ ವಿವಿಧ ಕ್ಷೇತ್ರಗಳಲ್ಲಿ ದುಡಿಮೆಯ ಸಂಕೋಲೆಯಲ್ಲಿ ಸಿಲುಕಿ ಶಾಲೆಯ ಮುಖವನ್ನೇ ಕಾಣದವರಾಗಿದ್ದಾರೆ. ಇವರಿಗೆ ರಕ್ಷಣೆ ಮತ್ತು ಶಿಕ್ಷಣದ ಅವಕಾಶ ಸಿಗಬೇಕು. ಈ ಸಂದರ್ಭದಲ್ಲಿ ಪೋಷಕರು, ಸಮುದಾಯದ ಸದಸ್ಯರು, ಗ್ರಾಮ ಪಂಚಾಯ್ತಿ ಸದಸ್ಯರು, ಅಂಗನವಾಡಿ ಕೇಂದ್ರಗಳು, ಅಧಿಕಾರಿ ವರ್ಗ, ಚುನಾಯಿತ ಪ್ರತಿನಿಧಿಗಳು, ಮಾಲೀಕರು, ಕಾರ್ಮಿಕರು, ನೌಕರರು, ಶಿಕ್ಷಕರು, ಮಾಧ್ಯಮಗಳು, ಕಾರ್ಪೋರೇಟ್ ವಲಯ – ಹೀಗೆ ಎಲ್ಲರಿಗೂ ಇದರಲ್ಲಿ ಒಂದು ಹೊಣೆಗಾರಿಕೆ ಇದೆ ; ಇರಬೇಕಾಗುತ್ತದೆ.

**ಡಾ. ಶಾಂತಾ ಸಿನ್ಹಾ,** ಅಧ್ಯಕ್ಷರು,
ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗ,
ನವದೆಹಲಿ.



# ಬಾಲಕಾರ್ಮಿಕ ಪದ್ಧತಿಯ ಕುರಿತು ಪ್ರಸ್ತುತವಾದ ಕೆಲವು ವ್ಯಾಖ್ಯೆಗಳನ್ನು ಇಲ್ಲಿ ನೋಡೋಣ

ಕೂಲಿ ಪಡೆದು ಅಥವಾ ಪಡೆಯದೇ, ಯಾವುದೇ ಕೆಲಸದಲ್ಲಿ ತೊಡಗಿರುವ 14 ವರ್ಷದೊಳಗಿನ ಶಾಲೆಯಿಂದ ಹೊರಗುಳಿದ ಮಕ್ಕಳೇ ಬಾಲ ಕಾರ್ಮಿಕರು.

## ಬಾಲಕಾರ್ಮಿಕ ಪದ್ಧತಿ ಎಂದರೇನು ?

ಮಕ್ಕಳನ್ನು ದುಡಿಮೆಯ ಕೂಪಕ್ಕೆ ತಳ್ಳಿ ಶೋಷಣೆ ಮಾಡುವ ಪದ್ಧತಿ ಇದು. ಬಾಲ್ಯವನ್ನು ಸವಿಯಲು ಇಲ್ಲಿ ಅವಕಾಶ ಇಲ್ಲ. ಕೂಲಿ ಇರಲಿ ಇಲ್ಲದೇ ಇರಲಿ, ದುಡಿಮೆ ಮಾಡಲೇ ಬೇಕಾಗುತ್ತದೆ. ಶಿಕ್ಷಣದ ಅವಕಾಶ, ಮನರಂಜನೆ, ಹೊಟ್ಟೆ ತುಂಬಾ ಊಟ ಹಾಗೂ ಅಂದವಾದ ಬಟ್ಟೆ ಇವುಗಳೆಲ್ಲ ಈ ಮಕ್ಕಳ ಪಾಲಿಗೆ ಕನಸು ಮಾತ್ರ. ನಸುಕಿನ 5 ಗಂಟೆಗೇ ಎದ್ದು ತಮ್ಮ ಕೆಲಸ ಶುರು ಮಾಡುವ ಮಕ್ಕಳೂ ಇದ್ದಾರೆ. ಕೆಲವು ಕಂದಮ್ಮಗಳು ದಿನಕ್ಕೆ 10ರಿಂದ 15 ಗಂಟೆವರೆಗೂ ದುಡಿಯುವುದುಂಟು. ಇವರ ಆದಾಯ ಮಾತ್ರ ಸರಾಸರಿ 10ರಿಂದ 30 ರೂಪಾಯಿಗಳು. ಮಕ್ಕಳಿಗೆ ಸಲ್ಲಬೇಕಾದ ಹಕ್ಕುಗಳಿಂದ ಅವರನ್ನು ವಂಚಿಸಿ, ದುಡಿಮೆಯ ಶ್ರಮದಲ್ಲಿ ನರಳುವಂತೆ ಮಾಡುವ ಪದ್ಧತಿಯೇ ಬಾಲಕಾರ್ಮಿಕತೆ.

**ಭಾರತದ ಸಂವಿಧಾನ :**

14 ವರ್ಷದೊಳಗಿನ ದುಡಿಯುವ ಮಕ್ಕಳನ್ನು ಬಾಲಕಾರ್ಮಿಕರೆಂದು ಸಂವಿಧಾನ ಗುರುತಿಸುತ್ತದೆ ; ಗಣಿಗಳು ಸೇರಿದಂತೆ ಅಪಾಯಕಾರಿ ಕ್ಷೇತ್ರಗಳಲ್ಲಿ ಮಕ್ಕಳನ್ನು ದುಡಿಸುವುದನ್ನು ಸಂವಿಧಾನ ನಿಷೇಧಿಸಿದೆ.

**ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಓ) :**

ಬಾಲ್ಯದಿಂದ ವಂಚಿತರಾಗಿ, ದೀರ್ಘವಾದ ಕೆಲಸದ ವೇಳೆಗೆ ಕಡಿಮೆ ಕೂಲಿ ಪಡೆದು ಅಥವಾ ಕೂಲಿ ಇಲ್ಲದೆ, ದೈಹಿಕ, ಮಾನಸಿಕ, ಸಾಮಾಜಿಕ, ಶೈಕ್ಷಣಿಕ ಬೆಳವಣಿಗೆಯ ಅವಕಾಶಗಳಿಂದ ವಂಚಿತರಾಗಿ, ಕೆಲವೊಮ್ಮೆ ಪೋಷಕರಿಂದ ದೂರ ಇದ್ದು, ಅಪಕ್ವ ವಯಸ್ಸಿನಲ್ಲಿ ವಯಸ್ಕರಂತೆ ವರ್ತಿಸುತ್ತ ಬದುಕುವ 14 ವರ್ಷದೊಳಗಿನವರನ್ನು ಬಾಲಕಾರ್ಮಿಕರೆಂದು ಕರೆಯುತ್ತಾರೆ.

**ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ (ಸಿಎಸಿಎಲ್) :**

ಬಾಲ್ಯದಿಂದ ವಂಚಿತರಾಗಿ, ಕಡಿಮೆ ಕೂಲಿ ಪಡೆದು ಅಥವಾ ಕೂಲಿ ಇಲ್ಲದೆ, ದೈಹಿಕ, ಮಾನಸಿಕ, ಸಾಮಾಜಿಕ, ಶೈಕ್ಷಣಿಕ ಬೆಳವಣಿಗೆಯನ್ನು ನಾಶಮಾಡಿಕೊಂಡು, ಶಿಕ್ಷಣ, ಆರೋಗ್ಯ ಮತ್ತು ವಿಕಾಸದ ಹಕ್ಕುಗಳಿಂದ ವಂಚಿತರಾಗಿ, ಅಪಕ್ವ ವಯಸ್ಸಿನಲ್ಲಿ ವಯಸ್ಕರ ಜೀವನ ನಡೆಸುವ 18 ವರ್ಷದೊಳಗಿನವರನ್ನು ಬಾಲಕಾರ್ಮಿಕರೆಂದು ಕರೆಯುತ್ತಾರೆ. ಔಪಚಾರಿಕ ಅಥವಾ ಅನೌಪಚಾರಿಕ ವಲಯಗಳಲ್ಲಿ, ಸಂಘಟಿತ ಅಥವಾ ಅಸಂಘಟಿತ ಕ್ಷೇತ್ರಗಳಲ್ಲಿ, ಕೂಲಿ ಪಡೆದು ಅಥವಾ ಪಡೆಯದೆ, ಮನೆಯೊಳಗೆ ಅಥವಾ ಹೊರಗೆ ದುಡಿಯುವ ಮಕ್ಕಳನ್ನು ಬಾಲಕಾರ್ಮಿಕರೆಂದು ಗುರುತಿಸಲಾಗಿದೆ.

ಮಕ್ಕಳು ಬೆಳೆಯುವ ವಯಸ್ಸಿನಲ್ಲಿ ಅವರ ಹಕ್ಕುಗಳನ್ನು ಕಿತ್ತುಕೊಂಡು ಅವರನ್ನು ದುಡಿಮೆಗೆ ಹಚ್ಚಿ ಅದರ ದುರ್ಲಾಭ ಪಡೆದುಕೊಳ್ಳುವುದು ವ್ಯಾಪಕವಾಗಿರುವ ಪದ್ಧತಿ. ಮನುಷ್ಯ ಇಂತಹ ನೀಚತನಕ್ಕೆ ಇಳಿಯಬಹುದು ಎಂಬುದನ್ನು ತಿಳಿದಾಗ ಎದೆ ನಡುಗುತ್ತದೆ.

**ದಿ। ಡಾ. ಎಚ್ಚೆಸ್ಕೆ,** ಮೈಸೂರು.

## ಶಕೀಲಾಳ ಕನಸು

ಬೆಂಗಳೂರಿನ 'ಅಪ್ಸ' ಸಂಸ್ಥೆಯಲ್ಲಿ ಆಶ್ರಯ ಪಡೆದ 12 ವರ್ಷದ ಶಕೀಲಾಳ ಕಥೆ ಭಯಾನಕವಾದದ್ದು. ಬಡತನದ ನೆಪದಲ್ಲಿ ಶಕೀಲಾಳನ್ನು ಪೋಷಕರು ಶಾಲೆಗೆ ಕಳುಹಿಸಲಿಲ್ಲ. ಇಬ್ಬರು ಸಹೋದರಿಯರು ಮತ್ತು ಒಬ್ಬ ಸಹೊದರನೊಂದಿಗೆ ಸೇರಿಕೊಂಡು ಶಕೀಲ ಚಿಂದಿ ಆಯುವುದು ಮತ್ತು ಭಿಕ್ಷೆ ಬೇಡುವುದರಲ್ಲಿ ತೊಡಗಿದ್ದಳು. ಬೆಂಗಳೂರಿನ ಬೀದಿ ಬೀದಿಗಳಲ್ಲಿ ಈ ಮಕ್ಕಳು ಗುಂಪಾಗಿ ಭಿಕ್ಷೆ ಬೇಡುತ್ತಿದ್ದರು. ಅವರ ಗುಂಪಿನಲ್ಲಿ ಒಟ್ಟು 21 ಮಂದಿ ಗಂಡು ಹಾಗೂ 10 ಮಂದಿ ಹೆಣ್ಣುಮಕ್ಕಳಿದ್ದರು. ಹನ್ನೆರಡರ ಈ ಬಾಲೆ ಹಲವು ಬಾರಿ ಲೈಂಗಿಕ ದುರ್ಬಳಕೆಗೆ ಕೂಡ ಒಳಗಾಗಿದ್ದಳು. ಒಮ್ಮೆ ಜಯನಗರದಲ್ಲಿ ನಿಂತುಕೊಂಡಿದ್ದ ಈ ಮಕ್ಕಳನ್ನು ಪೊಲೀಸರು ಠಾಣೆಗೆ ಕೊಂಡೊಯ್ದರು. ಮೊಬೈಲ್ ಫೋನುಗಳನ್ನು ಕದ್ದಿದ್ದಾರೆಂದು ಆರೋಪಿಸಿ ಆ ಮಕ್ಕಳನ್ನು ಪೋಲೀಸರು ಹೊಡೆಯಲು ಶುರು ಮಾಡಿದರು. ಸಂಘಸಂಸ್ಥೆಗಳ ಪದಾಧಿಕಾರಿಗಳ ಮಧ್ಯಪ್ರವೇಶದಿಂದಾಗಿ ಶಕೀಲ ಮತ್ತವಳ ಬಳಗ ಪೋಲೀಸರ ಹೊಡೆತದಿಂದ ಪಾರಾದರು. ನಂತರ, 'ಅಪ್ಸಾ' ಸಂಸ್ಥೆ ನಡೆಸುತ್ತಿರುವ 'ಮಕ್ಕಳ ಮನೆ'ಗೆ ಸೇರಿದಳು. ಕಲಿತು ಏನಾದರೊಂದು ಸ್ವಂತ ಉದ್ಯೋಗದಲ್ಲಿ ತೊಡಗಬೇಕೆನ್ನುವುದು ಈಗ ಆಕೆಯ ಮುಂದಿರುವ ಕನಸು.

## ಬಾಲಕಾರ್ಮಿಕರ ವ್ಯಾಪ್ತಿ

ದುಡಿಯುವ ಮಕ್ಕಳ ಸಂಖ್ಯೆಯ ಕುರಿತು ಖಚಿತವಾದ ಮಾಹಿತಿ ದೊರೆಕುವುದು ಕಷ್ಟಸಾಧ್ಯ. ಮಕ್ಕಳ ವಯೋಮಾನದ ಕುರಿತು ಇರುವ ಗೊಂದಲವೇ ಇದಕ್ಕೆ ಕಾರಣ. ದೇಶದಲ್ಲಿರುವ ಕಾಯ್ದೆಗಳಲ್ಲಿ ಏಕರೂಪವಾದ ವಯೋಮಾನ ನಿಗದಿಪಡಿಸಲು ಇದುವರೆಗೂ ಸಾಧ್ಯವಾಗಿಲ್ಲ. ಉದಾಹರಣೆಗೆ, 1986ರ ಬಾಲಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ ಪ್ರಕಾರ 14 ವರ್ಷದೊಳಗಿನವರನ್ನು ಮಕ್ಕಳು ಎಂದು ಗುರುತಿಸಲಾಗಿದ್ದರೆ, 2000ದ ಮಕ್ಕಳ ನ್ಯಾಯ (ಪೋಷಣೆ ಮತ್ತು ರಕ್ಷಣೆ) ಕಾಯ್ದೆಯಲ್ಲಿ 18 ವರ್ಷವೆಂದು ನಿಗದಿಪಡಿಸಲಾಗಿದೆ. ಈ ರೀತಿಯ ಗೊಂದಲಗಳು ಬಹುತೇಕ ಕಾಯ್ದೆಗಳಲ್ಲಿ ಕಂಡುಬರುತ್ತವೆ. ವರ್ಷಕ್ಕೊಮ್ಮೆ 14 ವರ್ಷದೊಳಗಿನ ಮಕ್ಕಳ ಗಣತಿ ಶಿಕ್ಷಣ ಇಲಾಖೆಯ ಮೂಲಕ ನಡೆಯುತ್ತದೆ. ಹತ್ತು ವರ್ಷಗಳಿಗೊಮ್ಮೆ ಜನಗಣತಿಯನ್ನು (ಸೆನ್ಸಸ್) ನಡೆಸಲಾಗುತ್ತದೆ. ಇದರಲ್ಲಿ ಮಕ್ಕಳ ಮತ್ತು ಬಾಲಕಾರ್ಮಿಕರ ಸಂಖ್ಯೆ ದೊರೆಯುತ್ತದೆ. ಪ್ರತಿ ವರ್ಷ ನಡೆಯುವ ಎನ್‌ಎಸ್‌ಎಸ್‌ಓ ಆವೃತ್ತಿಗಳೂ ಮಕ್ಕಳ

ಸಂಖ್ಯೆಯ ಮಾಹಿತಿ ನೀಡುವುದರಲ್ಲಿ ನೆರವಾಗುತ್ತದೆ. ಕಾರ್ಮಿಕ ಸಚಿವಾಲಯ, ಐಎಲ್‌ಓ, ಯುನಿಸೆಫ್ ಮತ್ತು ದೇಶದ ವಿವಿಧ ಸಂಘಸಂಸ್ಥೆಗಳು ಕೂಡಾ ಬಾಲಕಾರ್ಮಿಕರ ಸಂಖ್ಯೆಯನ್ನು ಗುರುತಿಸಿವೆ.

2001ರ ಜನಗಣತಿ ಪ್ರಕಾರ ಭಾರತದಲ್ಲಿ 5 ರಿಂದ 14 ವರ್ಷದೊಳಗಿನ ಮಕ್ಕಳ ಸಂಖ್ಯೆ 20.30 ಕೋಟಿ. ಇದರಲ್ಲಿ 11.60 ಕೋಟಿ ಮಕ್ಕಳು ಶಾಲೆಯಲ್ಲಿದ್ದಾರೆ. 1.26 ಕೋಟಿ ಮಕ್ಕಳು ಬಾಲಕಾರ್ಮಿಕರಾಗಿದ್ದಾರೆ. 7.40 ಕೋಟಿ ಮಕ್ಕಳ ಮಾಹಿತಿ ಇಲ್ಲ. ಇವರು ಶಾಲೆಗೆ ಹೋಗದೆ, ತಮ್ಮ ಮನೆಗಳಲ್ಲಿ, ಹೊಲದಲ್ಲಿ ಅಥವಾ ಇನ್ನಿತರರಿಗಾಗಿ ದುಡಿಯುತ್ತಿರಬಹುದು. ಕರ್ನಾಟಕ ದಲ್ಲಿ ಬಾಲಕಾರ್ಮಿಕರ ಸಂಖ್ಯೆ 8,20,000.

ಐಎಲ್‌ಓದ ಅಂಕಿಅಂಶಗಳ ಬ್ಯೂರೋ (2000) ಪ್ರಕಾರ ಜಗತ್ತಿನಲ್ಲಿ ಒಟ್ಟು 24.60 ಕೋಟಿ ಬಾಲಕಾರ್ಮಿಕರಿದ್ದಾರೆ. ಇವರಲ್ಲಿ 52% ಮಕ್ಕಳು (18.60 ಕೋಟಿ) 5ರಿಂದ 14 ವರ್ಷದೊಳಗಿನವರು. ಉಳಿದ 48% ಮಕ್ಕಳು (6 ಕೋಟಿ) 15ರಿಂದ 17 ವರ್ಷದೊಳಗಿನವರು. ಇವರಲ್ಲಿ 18 ಲಕ್ಷ ಮಕ್ಕಳು ವೇಶ್ಯಾವಾಟಿಕೆ ಮತ್ತು ಅಶ್ಲೀಲ ಚಿತ್ರ ನಿರ್ಮಾಣದ ಅಪಾಯಕಾರಿ ಸುಳಿಯಲ್ಲಿ ಸಿಲುಕಿದ್ದಾರೆ. ಈ ಅಂಕಿಅಂಶಗಳ ಪ್ರಕಾರ ಜಗತ್ತಿನ 6 ಮಕ್ಕಳಲ್ಲಿ ಒಂದು ಮಗು ದುಡಿಯುವ ಮಗುವಾಗಿರುತ್ತದೆ. ಭಾರತವು ಜಗತ್ತಿನಲ್ಲೇ ಅತಿ ಹೆಚ್ಚು ಬಾಲಕಾರ್ಮಿಕರನ್ನು ಹೊಂದಿರುವ ದೇಶವಾಗಿದೆ.

## ಮಕ್ಕಳು ದುಡಿಯುವ ಕ್ಷೇತ್ರಗಳು – ಎಲ್ಲಿವೆ ? ಅವು ಯಾವುವು ?

ಮಕ್ಕಳ ದುಡಿಮೆಯಿಂದ ಹೊರತಾದ ಒಂದೇ ಒಂದು ಕ್ಷೇತ್ರ ಇಲ್ಲವೆಂದು ಮಕ್ಕಳ ರಕ್ಷಣಾ ಆಯೋಗದ ರಾಷ್ಟ್ರೀಯ ಅಧ್ಯಕ್ಷೆ ಡಾ. ಶಾಂತಾ ಸಿನ್ಹಾ ಹೇಳುತ್ತಾರೆ. ಕೆಲವು ಕ್ಷೇತ್ರಗಳಲ್ಲಿ ಮಕ್ಕಳ ದುಡಿಮೆ ಕಣ್ಣಿಗೆ ರಾಚುವಂತಿದ್ದರೆ, ಮತ್ತೆ ಕೆಲವು ಕ್ಷೇತ್ರಗಳಲ್ಲಿನ ಮಕ್ಕಳ ದುಡಿಮೆ ಅಗೋಚರವಾಗಿರುತ್ತದೆ. ಹೋಟೆಲ್, ಗ್ಯಾರೇಜ್, ಫೌಂಡ್ರಿಗಳು, ಮಂಡಕ್ಕಿ ಭಟ್ಟಿ, ಅಗರಬತ್ತಿ, ಇಟ್ಟಿಗೆ ತಯಾರಿಕೆ, ಕಟ್ಟಡ ನಿರ್ಮಾಣ, ಸಿಮೆಂಟ್ ಮತ್ತು ಸುಣ್ಣ ತಯಾರಿಕೆ, ರಸ್ತೆ ಕಾಮಗಾರಿ, ಉಡುಪು ತಯಾರಿಕೆ, ಫುಟ್‌ಬಾಲ್, ರತ್ನಗಂಬಳಿ, ಪಟಾಕಿ, ಬೆಂಕಿಪೊಟ್ಟಣ, ಬಳೆ, ಗಾಜು, ಬೀಗ, ಸಾಬೂನು, ಜಮಖಾನೆ, ಹಗ್ಗ, ಕಾಗದ ಇವುಗಳ ತಯಾರಿಕೆ, ಕುಂಬಾರಿಕೆ, ಅರಳು ತಿದ್ದುವಿಕೆ, ಬೀಡಿ, ಕಲ್ಲು ಗಣಿ, ಕಲ್ಲು ಒಡೆಯುವುದು, ತಂಬಾಕು ಮಿಶ್ರಣ ಮತ್ತು ತಯಾರಿಕೆ, ಟೈರ್ ತಯಾರಿಕೆ ಮತ್ತು ದುರಸ್ತಿ, ಬಳಪ, ಹತ್ತಿ, ಕೈಮಗ್ಗ, ರೇಷ್ಮೆ ಸಂಸ್ಕರಣೆ,



ಕಸಾಯಿಖಾನೆ, ಮಾಂಸದಂಗಡಿ, ಮೀನುಗಾರಿಕೆ, ದಿನಸಿ ಅಂಗಡಿಗಳು, ರಸ್ತೆಬದಿ ವ್ಯಾಪಾರ, ಭಿಕ್ಷಾಟನೆ, ಚಿಂದಿ ಆಯುವುದು, ಚರ್ಮ ಹದ ಮಾಡುವುದು, ಬೇಕರಿ, ಕ್ಲಿನಿಕ್, ಬೂಟ್ ಪಾಲಿಷ್, ಮನೆಕೆಲಸ, ಸರ್ಕಸ್ ಇತ್ಯಾದಿ ಕ್ಷೇತ್ರಗಳಲ್ಲಿ ಮಕ್ಕಳು ನಿರಂತರ ದುಡಿಮೆಯಲ್ಲಿ ನಿರತರಾಗಿದ್ದಾರೆ.

1986ರ ಬಾಲಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ ಪ್ರಕಾರ ಸರ್ಕಾರ ಗುರುತಿಸಿರುವ ಅಪಾಯಕಾರಿ ಉದ್ದಿಮೆಗಳು ಒಟ್ಟು 81. ಇದರಲ್ಲಿ ಉದ್ಯೋಗಗಳು (16) ಮತ್ತು ಪ್ರಕ್ರಿಯೆಗಳು (65) ಎಂದು ವಿಂಗಡಿಸಲಾಗಿದೆ. ಹೋಟೆಲ್, ರಸ್ತೆಬದಿ ಡಾಬಾ ಮತ್ತು ಮನೆಗೆಲಸ ಇವು 2006 ರ ಅಧಿಸೂಚನೆ ಪ್ರಕಾರ ಈ ಕಾಯ್ದೆಯೊಳಗೆ ಸೇರ್ಪಡೆಯಾಗಿವೆ.

## ಕೃಷಿ ಕ್ಷೇತ್ರ

ಕೃಷಿಗೆ ಸಂಬಂಧಪಟ್ಟ ಅನೇಕ ಕೆಲಸಗಳಲ್ಲಿ ಮಕ್ಕಳು ತೊಡಗಿರುವುದನ್ನು ಕಾಣಬಹುದು. ಜಾನುವಾರು ಗಳನ್ನು ಮೇಯಿಸುವುದು, ಹಾಲು ಕರೆಯುವುದು, ಹುಲ್ಲು ಕೊಂಡೊ ಯ್ಯುವುದು, ಹಣ್ಣು–ಹೂ–ಎಲೆ ಕು ಯ್ಯುವುದು, ತೋಟ ಕಾಯುವುದು, ಬತ್ತ–ಕಾಳು ಶುಚಿಗೊಳಿಸುವುದು, ಅಕ್ಕಿ ಗಿರಣಿ, ಉಳುಮೆ, ಬೀಜ ಬಿತ್ತನೆ, ಗೊಬ್ಬರ, ಕೀಟನಾಶಕ ಮಿಶ್ರಣ ಮತ್ತು ಅದನ್ನು ಹೊಲಕ್ಕೆ ಕೊಂಡೊಯ್ಯುವುದು, ಟ್ರ್ಯಾಕ್ಟರ್ ಮತ್ತು ಟಿಲ್ಲರ್‌ಗಳನ್ನು ತೊಳೆಯುವುದು, ಎತ್ತಿನ ಗಾಡಿ ಓಡಿಸುವುದು, ಕೃಷಿ ಪರಿಕರಗಳು ಮತ್ತು ಉತ್ಪನ್ನಗಳನ್ನು ಸಾಗಿಸುವುದು... ಹೀಗೆ ಅದೃಶ್ಯ ದುಡಿಮೆಗಾರರಾಗಿ ಮಕ್ಕಳು ಕೆಲಸ ಮಾಡುತ್ತಿದ್ದಾರೆ. ಕೃಷಿ ಸಂಬಂಧಿತ ಕೆಲಸಗಳಲ್ಲಿ ಮತ್ತು ಇತರರ ಮನೆಗಳಲ್ಲಿ ಮನೆಕೆಲಸದವರಾಗಿ ಜೀತ ಮಾಡುವ ಮಕ್ಕಳ ಸಂಖ್ಯೆ ಅತಿ ಹೆಚ್ಚಾಗಿದೆ.

ಇದಲ್ಲದೆ, ಮಕ್ಕಳು ಸಿಲುಕಿರುವ ಮತ್ತೊಂದು ಅಪಾಯಕಾರಿ ಕ್ಷೇತ್ರವೆಂದರೆ ವೇಶ್ಯಾವಾಟಿಕೆ. ದೇಶದಾದ್ಯಂತ ವ್ಯಾಪಕವಾಗಿ ಬೆಳೆಯುತ್ತಿರುವ ಈ ಜಾಲ ಎಳೆಯ ಮಕ್ಕಳನ್ನೂ ಬಿಡದಂತೆ ತನ್ನತ್ತ ಸೆಳೆದುಕೊಂಡಿದೆ. ಎಳೆ ವಯಸ್ಸಿನ ಹೆಣ್ಣುಮಕ್ಕಳನ್ನು ಮಾರಾಟ ಮಾಡುವುದು ಮತ್ತು ಸಾಗಿಸುವುದು ನಿರಂತರವಾಗಿ ನಡೆಯುತ್ತಿರುವ ಒಂದು ದಂಧೆಯಾಗಿದೆ. ಭಾರತದಲ್ಲಿ, 9ರಿಂದ 14 ವರ್ಷದೊಳಗಿನ ಸುಮಾರು 5 ಲಕ್ಷದಷ್ಟು ಮಕ್ಕಳು ಈ ಕ್ರೂರ ಜಾಲದಲ್ಲಿ ಸಿಲುಕಿದ್ದಾರೆಂದು ಅಧ್ಯಯನಗಳು ಹೇಳುತ್ತವೆ.

## ಆಟೋ ಚಾಲಕರ ಸಂಘದ ಸಾಧನೆ :

## ಭಿಕ್ಷಾಟನೆಯಿಂದ ಪಾರಾದ ರಮ್ಯರಾಣಿ

10 ವರ್ಷದ ರಮ್ಯರಾಣಿ ಕೇರಳದ ಕೊಚ್ಚಿಯ ವಾತ್ಸಲ್ಯ ಭವನದಲ್ಲಿ ಕಲಿಯುತ್ತಿದ್ದಾಳೆ. ಎರ್ನಾಕುಳಂ ಸಮೀಪದ ಒಂದು ಹಳ್ಳಿ ಆಕೆಯ ಊರು. ಆದರೆ, ಆಕೆಗೆ ಆರು ವಯಸ್ಸು ತುಂಬುವವರೆಗೆ ಆಕೆ ಬೆಳೆದಿದ್ದು ತನ್ನ ತಾಯಿಯೊಂದಿಗೆ ಎರ್ನಾಕುಳಂ ಬಸ್ ನಿಲ್ದಾಣದಲ್ಲಿ. ರಮ್ಯ 5 ವಯಸ್ಸಿನವಳಿದ್ದಾಗ ಅಜ್ಜಿ ಜೊತೆ ಭಿಕ್ಷೆ ಬೇಡಲು ಹೋಗುತ್ತಿದ್ದಳು. 6 ವರ್ಷ ಇದ್ದಾಗ, 'ಅಣ್ಣ'ನೊಬ್ಬ ಬಂದು ರಮ್ಯಳನ್ನು ಮನೆಯೊಂದಕ್ಕೆ ಕರೆದುಕೊಂಡು ಹೋಗುವುದರ ಕುರಿತು ಮಾತನಾಡಿದ. ಅವಳ ತಾಯಿ ಅದನ್ನು ಒಪ್ಪಿದಳು. ಆ ಮನೆಯಲ್ಲಿ ಒಬ್ಬರು ಅಕ್ಕ, ಅವರ ಮಗ ಮತ್ತು ಮಗಳು ಇದ್ದರು. ಎರಡು ಮೂರು ದಿನಗಳು ಕಳೆದ ಮೇಲೆ, ಅಕ್ಕ ರಮ್ಯಳಿಗೆ ಕೆಲಸ ಕೊಡಲು ಪ್ರಾರಂಭಿಸಿದಳು. ರಮ್ಯ ಕೋಣೆಗಳನ್ನು ಗುಡಿಸಿ ಒರೆಸಿದಳು, ಬಟ್ಟೆ ಒಗೆದಳು, ಪಾತ್ರೆ ತೊಳೆದಳು, ಕರುವಿಗೆ ಕುಡಿಯಲು ನೀರು ಕೊಟ್ಟಳು. ಬೆಳಿಗ್ಗೆಯಿಂದ ರಾತ್ರಿ ವರೆಗೂ ರಮ್ಯ ಕೆಲಸ ಮಾಡಿದಳು. ಎಲ್ಲರೂ ರಮ್ಯಳನ್ನು ಇಷ್ಟಪಟ್ಟರು. ಅವಳಿಗೆ ಧಾರಾಳವಾಗಿ ಉಣ್ಣಲು ತಿನ್ನಲು ನೀಡಿದರು.

ಒಂದು ದಿನ ರಾತ್ರಿ ನಿದ್ರಿಸುತ್ತಿದ್ದ ರಮ್ಯಳ ಬಳಿ ಆ ಅಕ್ಕನ ಮಗ ಬಂದು ಮಲಗಿದ. ರಮ್ಯ ಕಿರುಚಿಕೊಂಡಳು. ನಂತರ ಒಂದು ದಿನ ಅವಳು ಕೆಲಸ ಮಾಡಲೇ ಇಲ್ಲ. ಇದಕ್ಕಾಗಿ ಆ ಮನೆಯ ಅಕ್ಕ ಆಕೆಯನ್ನು ಚೆನ್ನಾಗಿ ಬೈದರು. ತನ್ನ ತಾಯಿಯ ಹತ್ತಿರ ವಾಪಸ್ಸು ಹೋಗಬೇಕೆಂದು ರಮ್ಯ ತಿಳಿಸಿದಳು. ಕೂಡಲೇ ಅಕ್ಕ ಅವಳನ್ನು ಎರ್ನಾಕುಳಂನಲ್ಲಿ ತಾಯಿಯ ವಶಕ್ಕೆ ತಂದು ಬಿಟ್ಟರು. ಮತ್ತೆ ಭಿಕ್ಷಾಟನೆಯಲ್ಲಿ ತೊಡಗಿದ ಆಕೆಯನ್ನು ಗಮನಿಸಿದ ಅಲ್ಲಿನ ಆಟೋರಿಕ್ಷಾ ಚಾಲಕರ ಸಂಘದ ಸದಸ್ಯರು ನಗರದ ವಾತ್ಸಲ್ಯ ಭವನಕ್ಕೆ ಮಾಹಿತಿ ನೀಡಿದರು. ವಾತ್ಸಲ್ಯ ಭವನದ ಕಾರ್ಯಕರ್ತರು ಕೂಡಲೇ ಸ್ಥಳಕ್ಕೆ ಬಂದು ಬಾಲಕಿಯನ್ನು ಪುನರ್ವಸತಿಗಾಗಿ ವಶಕ್ಕೆ ತೆಗೆದುಕೊಂಡರು. ಈಗ ರಮ್ಯರಾಣಿ ತನ್ನ ಶಿಕ್ಷಣ ಮುಂದುವರೆಸುತ್ತಿದ್ದಾಳೆ. ಚಾಲಕರ ಸಂಘವು ತೆಗೆದುಕೊಂಡ ಕ್ರಮ ಸಾರ್ವಜನಿಕರ ಮತ್ತು ಮಾಧ್ಯಮಗಳ ಗಮನ ಸೆಳೆಯಿತು.



# ಅಧ್ಯಾಯ 3

## ಮಿಥ್ಯೆಗಳು ಮತ್ತು ವಾಸ್ತವಾಂಶಗಳು

ನಮ್ಮ ಸಮಾಜದಲ್ಲಿ ಬಾಲಕಾರ್ಮಿಕ ಪದ್ಧತಿಯನ್ನು ಮುಂದುವರೆಸಲು ಅನುಕೂಲಕರವಾದ ಹಲವು ಮಿಥ್ಯೆಗಳು ಅಥವಾ ತಪ್ಪುಕಲ್ಪನೆಗಳಿವೆ. ಆದರೆ ವಾಸ್ತವಾಂಶವೇ ಬೇರೆ ಇರುತ್ತದೆ.

**ಮಿಥ್ಯೆ :** ಬಾಲಕಾರ್ಮಿಕ ಪದ್ಧತಿಗೆ ಬಡತನವೇ ಕಾರಣ.

**ಸತ್ಯ :** ಬಾಲಕಾರ್ಮಿಕ ಪದ್ಧತಿಗೆ ಬಡತನ ಕಾರಣವಲ್ಲ. ಬಾಲಕಾರ್ಮಿಕ ಪದ್ಧತಿಯೇ ಬಡತನಕ್ಕೆ ಕಾರಣವಾಗುತ್ತದೆ. ಅನಕ್ಷರತೆ, ಅರಿವಿನ ಕೊರತೆ, ಕಡಿಮೆ ಕೂಲಿ, ಸರ್ಕಾರದ ಯೋಜನೆಗಳ ಕುರಿತ ಮಾಹಿತಿಯ ಕೊರತೆ... ಇವು ಬಾಲಕಾರ್ಮಿಕರ ಬದುಕನ್ನು ಮತ್ತಷ್ಟು ಬಡತನದತ್ತ ತಳ್ಳುತ್ತವೆ. ಕೇರಳದಲ್ಲಿ ಬಡವರೆಲ್ಲರೂ ತಮ್ಮ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸಿದರೆ, ಪಂಜಾಬಿನ ಶ್ರೀಮಂತ ರೈತರು ತಮ್ಮ ಮಕ್ಕಳನ್ನು ಶಾಲಾ ಶಿಕ್ಷಣಕ್ಕೆ ವಿಮುಖರನ್ನಾಗಿಸುತ್ತಾರೆ. ಬಡತನ ಕಾರಣ ಎನ್ನುವುದು ಬಾಲಕಾರ್ಮಿಕ ಪದ್ಧತಿಗೆ ನೀಡುವ ಒಂದು ನೆಪ ಅಷ್ಟೇ.

**ಮಿಥ್ಯೆ :** ಮಕ್ಕಳು ದುಡಿಯದೇ ಇದ್ದರೆ ಪೋಷಕರು ಆರ್ಥಿಕ ಸಂಕಷ್ಟದಲ್ಲಿ ಸಿಲುಕುತ್ತಾರೆ.

**ಸತ್ಯ :** ಮಕ್ಕಳು ದುಡಿಯದೇ ಇದ್ದರೆ, ಪೋಷಕರಿಗೆ ಏನೂ ಸಮಸ್ಯೆಯಾಗದು. ಮಕ್ಕಳ ದುಡಿಮೆಯಿಂದ ಯಾವುದೇ ಪೋಷಕರ ಆರ್ಥಿಕ ಸಂಕಷ್ಟ ಬಗೆಹರಿಯುವುದಿಲ್ಲ. ದುಡಿಯಬೇಕಾದದ್ದು ವಯಸ್ಕರೇ ಹೊರತು ಮಕ್ಕಳಲ್ಲ. ಬಹುತೇಕ ಪೋಷಕರು ಮಕ್ಕಳ ಶಿಕ್ಷಣದ ಕುರಿತು ಬೇಜವಾಬ್ದಾರರಾಗಿರುತ್ತಾರೆ. ಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರವು ಅನೇಕ ಸೌಲಭ್ಯಗಳನ್ನು ಒದಗಿಸಿದೆ. ಅವುಗಳನ್ನು ಮಕ್ಕಳಿಗೆ ತಲುಪಿಸುವುದು ಪೋಷಕರ ಆದ್ಯ ಕರ್ತವ್ಯವಾಗಿದೆ. ಅದಲ್ಲದೆ, ಮಕ್ಕಳು ಶಿಕ್ಷಣ ಪಡೆಯುತ್ತಿದ್ದರೆ, ಪೋಷಕರು ಹೆಚ್ಚು ಜವಾಬ್ದಾರರಾಗುತ್ತಾರೆ ಮತ್ತು ಅವರ ಕುಟುಂಬದ ಜೀವನಮಟ್ಟ ಸುಧಾರಿಸುತ್ತದೆ.

**ಮಿಥ್ಯೆ :** ಮಕ್ಕಳನ್ನು ಶಾಲೆಗೆ ಕಳುಹಿಸಲು ಬಡಪೋಷಕರು ತಯಾರಿಲ್ಲ.

**ಸತ್ಯ :** ಮಕ್ಕಳು ನಿರಕ್ಷರಕುಕ್ಷಿಗಳಾಗಲೆಂದು ಯಾವ ಪೋಷಕರೂ ಬಯಸುವುದಿಲ್ಲ. ಮಕ್ಕಳ ಶಿಕ್ಷಣಕ್ಕೆ ಕೈ ತುಂಬಾ ಹಣ ಬೇಕಾಗುತ್ತದೆ ಎನ್ನುವುದು ಅವರ ನಂಬಿಕೆ. ಶಿಕ್ಷಣ ಉಚಿತ ಮತ್ತು ಕಡ್ಡಾಯ ಎನ್ನುವುದೇ ಬಹುತೇಕ ಬಡಪೋಷಕರಿಗೆ ಗೊತ್ತಿಲ್ಲ. ಇದಲ್ಲದೆ, ಅನೇಕ ಪೋಷಕರು ವಲಸೆ ದುಡಿಮೆಯನ್ನು ಅವಲಂಬಿಸಿರುತ್ತಾರೆ. ಕುಟುಂಬಗಳು ಒಂದೆಡೆ ನೆಲೆ ನಿಲ್ಲದೆ ಇರುವುದರಿಂದಾಗಿ, ಮಕ್ಕಳು ನಿರಂತರವಾಗಿ ಶಿಕ್ಷಣ ಪಡೆಯಲು ತೊಂದರೆಯಾಗುತ್ತದೆ. ವಲಸೆ ಹೋಗುವ ಪೋಷಕರ ಮಕ್ಕಳಿಗೆ ವಸತಿ ಸೌಕರ್ಯ ಕಲ್ಪಿಸಲು ಸರ್ಕಾರ / ಸಂಘ ಸಂಸ್ಥೆಗಳು ಮುಂದಾಗಬೇಕು.

**ಮಿಥ್ಯೆ :** ಶಾಲೆ ಬಿಟ್ಟು ಸುಮ್ಮನೆ ಮನೆಯಲ್ಲಿರುವವರು ಬಾಲಕಾರ್ಮಿಕರಲ್ಲ.

**ಸತ್ಯ :** ಶಾಲೆಯಿಂದ ಹೊರಗುಳಿದ ಎಲ್ಲ ಮಕ್ಕಳನ್ನೂ ಬಾಲಕಾರ್ಮಿಕರೆಂದೇ ಪರಿಗಣಿಸಲಾಗುತ್ತದೆ. ಶಾಲೆಯಲ್ಲಿ ಇಲ್ಲದ ಮಕ್ಕಳು ಏನು ಮಾಡಲು ಸಾಧ್ಯ? ಮಕ್ಕಳು ಸುಮ್ಮನೆ ಮನೆಯಲ್ಲಿ ಕುಳಿತಿರಲು ಸಾಧ್ಯವೇ ಇಲ್ಲ. ಆದುದರಿಂದ ಅವರನ್ನು ಮನೆಕೆಲಸ ಅಥವಾ ಹೊರಗಿನ ಕೆಲಸಕ್ಕೆ ಹಚ್ಚುವುದು ಸಾಮಾನ್ಯ. ಮಕ್ಕಳನ್ನು ಶಾಲೆ ಬಿಡಿಸಿ ಮನೆಯಲ್ಲಿ ಇರಿಸಿಕೊಂಡರೆ ಪೋಷಕರು ಕಾನೂನು ಕ್ರಮವನ್ನು ಎದುರಿಸಬೇಕಾಗುತ್ತದೆ.

**ಮಿಥ್ಯೆ :** ಬಡಮಕ್ಕಳಿಗೆ ದುಡಿಮೆ ಬಿಟ್ಟರೆ ಬೇರೆ ದಾರಿಯಿಲ್ಲ.

**ಸತ್ಯ :** ಬಡಮಕ್ಕಳ ಶಿಕ್ಷಣಕ್ಕಾಗಿ ಮತ್ತು ಅವರ ಅಭ್ಯುದಯಕ್ಕಾಗಿ ಸರ್ಕಾರ, ಸ್ವಯಂಸೇವಾ ಸಂಸ್ಥೆಗಳು ಮತ್ತು ನಾಗರಿಕ ಸಂಘ ಸಂಸ್ಥೆಗಳು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. 6ರಿಂದ 14 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣ, ಊಟ, ಬಟ್ಟೆ, ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಮಕ್ಕಳು ಅನುಸರಿಸಬೇಕಾದ ದಾರಿಯೆಂದರೆ ಅದು ಶಿಕ್ಷಣ ಪಡೆಯುವುದು ಮಾತ್ರ. ದುಡಿಮೆ ವಯಸ್ಕರ ಕರ್ತವ್ಯವೇ ಹೊರತು ಮಕ್ಕಳದ್ದಲ್ಲ.

**ಮಿಥ್ಯೆ :** ಕೆಲವು ವೃತ್ತಿಗಳನ್ನು ಮಕ್ಕಳು ಮಾತ್ರವೇ ಕೈಗೊಳ್ಳಲು ಸಾಧ್ಯ.

**ಸತ್ಯ :** ಇದರಲ್ಲಿ ಯಾವುದೇ ತಿರುಳಿಲ್ಲ. ಮಕ್ಕಳು ಅತಿಶೀಘ್ರ ಕೆಲಸ ಮಾಡುತ್ತಾರೆ ಮತ್ತು ಅವರ ಮೃದು ಮತ್ತು ಸೂಕ್ಷ್ಮವಾದ ಕೈಬೆರಳುಗಳು ರತ್ನಗಂಬಳಿ, ಚಹಾತೋಟದಂತಹ ಕೆಲಸಗಳಿಗೆ ಅತ್ಯಗತ್ಯ ಎಂಬ ಪ್ರಚಾರವನ್ನು ಹರಿಯಬಿಡಲಾಗಿದೆ. ಆದರೆ, ಇದು ಸತ್ಯವಲ್ಲ ಎಂಬುದು ಸಂಶೋಧನೆಗಳಿಂದ ಸಾಬೀತಾಗಿದೆ. ಮಕ್ಕಳಿಂದ ಕಡಿಮೆ ಕೂಲಿ ನೀಡಿ ಹೆಚ್ಚು ದುಡಿಸಿಕೊಳ್ಳಬಹುದೆಂಬುದೇ ಇದರ ಹಿಂದಿರುವ ಹುನ್ನಾರ. ವಾಸ್ತವವಾಗಿ ಈ ಕೆಲಸಗಳನ್ನು ವಯಸ್ಕರೇ ಸಮರ್ಪಕವಾಗಿ ಮಾಡಬಲ್ಲರು. ನಿರುದ್ಯೋಗ ವ್ಯಾಪಕವಾಗಿರುವ ನಮ್ಮ ದೇಶದಲ್ಲಿ ಮಕ್ಕಳು ಮಾಡುವ ಕೆಲಸಗಳನ್ನು ವಯಸ್ಕರು ಮಾಡಲಿ; ಅವರಿಗೆ ಉದ್ಯೋಗ ಸಿಗುವಂತಾಗಲಿ.

**ಮಿಥ್ಯೆ :** ಅಪಾಯಕಾರಿ ಅಲ್ಲದ ಕ್ಷೇತ್ರಗಳಲ್ಲಿ ಮಕ್ಕಳು ದುಡಿಯಬಹುದಾಗಿದೆ.

**ಸತ್ಯ :** ಅಪಾಯಕಾರಿ ಮತ್ತು ನಿರಪಾಯಕಾರಿ ಎಂಬ ಭೇದವೇ ಅರ್ಥವಿಲ್ಲದ್ದು. ಮಕ್ಕಳ ಪಾಲಿಗೆ ಎಲ್ಲಾ ಬಗೆಯ ದುಡಿಮೆಗಳೂ ಅಪಾಯಕಾರಿಯೇ. ಮಕ್ಕಳ ಸಮಗ್ರ ವಿಕಾಸ, ಶಿಕ್ಷಣ, ಆರೋಗ್ಯ, ಮನರಂಜನೆ, ಆಟ ಮತ್ತು ವಿಶ್ರಾಂತಿಯ ಹಕ್ಕುಗಳಿಂದ ಅವರನ್ನು ವಂಚಿತರರನ್ನಾಗಿ ಮಾಡುವ ಯಾವುದೇ ಕೆಲಸವೂ ಅಪಾಯಕಾರಿಯೇ. ಅಪಾಯಕಾರಿ ಮತ್ತು ನಿರಪಾಯಕಾರಿ ಎನ್ನುವ ಪರಿಕಲ್ಪನೆಯಿಂದಾಗಿಯೇ ಬಾಲಕಾರ್ಮಿಕ ಪದ್ಧತಿ ಇನ್ನೂ ಜೀವಂತವಾಗಿದೆ.

**ಮಿಥ್ಯೆ :** ಎಳೆವಯಸ್ಸಿನಲ್ಲಿ ದುಡಿದು ವೃತ್ತಿಯೊಂದು ಕಲಿತರೆ ಒಳ್ಳೆಯ ಭವಿಷ್ಯ ಖಚಿತ.

**ಸತ್ಯ :** ಬಾಲಕಾರ್ಮಿಕರು ಮಾಡುವಂತಹ ಕೆಲಸಗಳು ವೃತ್ತಿ ಕೌಶಲ್ಯವನ್ನು ಕಲಿಯಲು ಪೂರಕವಾದುದಲ್ಲ. ಉದ್ದಿಮೆಗಳಲ್ಲಿ ಮಕ್ಕಳನ್ನು ಸಹಾಯಕರನ್ನಾಗಿ ಬಳಸಿಕೊಳ್ಳಲಾಗುತ್ತದೆ. ಕಠಿಣವಾದ ದೈಹಿಕ ದುಡಿಮೆ, ಧೂಳು, ವಿಷಕಾರಿ ಹೊಗೆ ಮತ್ತು ರಾಸಾಯನಿಕಗಳು ಮಕ್ಕಳ ಆರೋಗ್ಯಕ್ಕೆ ಅತ್ಯಂತ ಹಾನಿಕಾರಕ. ಶೇ. 95ರಷ್ಟು ಬಾಲಕಾರ್ಮಿಕರು ತಮ್ಮ ಹದಿಹರೆಯದಲ್ಲಿ ಅಥವಾ ಯೌವನದಲ್ಲಿ ಅದೇ ಕೆಲಸದಲ್ಲಿ ಮುಂದುವರೆಯುತ್ತಿಲ್ಲ ಎಂಬುದು ಸಂಶೋಧನೆಗಳಿಂದ ತಿಳಿದುಬಂದಿದೆ.

**ಮಿಥ್ಯೆ :** ಪರಂಪರಾಗತ ಕಲೆ ಮತ್ತು ಕಸುಬು ಉಳಿಸಲು ಬಾಲಕಾರ್ಮಿಕ ಪದ್ಧತಿ ಅಗತ್ಯ.

**ಸತ್ಯ :** ತಮ್ಮ ಪರಂಪರಾಗತ ಕಲೆ ಕಸುಬುಗಳನ್ನು ಮಕ್ಕಳು ಬಾಲ್ಯದಲ್ಲೇ ಮೈಗೂಡಿಸಿಕೊಳ್ಳುತ್ತಾ ಬೆಳೆಯುವುದು ಒಳ್ಳೆಯದೇ. ಆದರೆ ಅದನ್ನವರು ಬಾಲ್ಯಸಹಜ ಕುತೂಹಲದಿಂದ ಗಮನಿಸುತ್ತಾ ಕಲಿಯುವಂತಿರಬೇಕೇ ಹೊರತು ಅನಿವಾರ್ಯ ದುಡಿಮೆಯಾಗಬಾರದು. ಸಮಗ್ರ ವಿಕಾಸದ ಶಿಕ್ಷಣ ಜೊತೆಯಲ್ಲಿ ಕಸುಬು ಕಲಿಯುವ ಆಯ್ಕೆಯ ಅವಕಾಶಗಳಿರಬೇಕು. ಸಾಂಪ್ರದಾಯಿಕ ಕಲೆ ವೃತ್ತಿ ಅಥವಾ ಕಸುಬು ಮಕ್ಕಳ ಮೂಲಭೂತ ಶಿಕ್ಷಣಕ್ಕೆ ಎರವಾಗಕೂಡದು.

**ಮಿಥ್ಯೆ :** ಕೆಲಸ ಮಾಡಲು ಮಕ್ಕಳು ಇಷ್ಟಪಡುತ್ತಾರೆ.

**ಸತ್ಯ :** ಮಕ್ಕಳ ಆದ್ಯತೆ ಆಟಪಾಠಗಳೇ ಹೊರತು ದುಡಿಮೆಯಲ್ಲ. ಪೋಷಕರ ಒತ್ತಾಯಕ್ಕೆ ಅಥವಾ ಪ್ರೀತಿಯ ಪ್ರೇರೇಪಣೆಗೆ ಮಣಿದು ಮಕ್ಕಳು ದುಡಿಯಲು ಹೋಗುತ್ತಾರೆ. ಸ್ವತಂತ್ರ ಚಿಂತನೆಯ ವಾತಾವರಣ ಅವರಿಗೆ ಲಭ್ಯವಿರುವುದಿಲ್ಲ. ಪೂರಕವಲ್ಲದ ಶಾಲಾ ಪರಿಸರ, ಶಿಕ್ಷಕರ ನಿಂದನೆ ಮತ್ತು ಹಿಂಸೆ, ದೈನಂದಿನ ಬದುಕಿನೊಂದಿಗೆ ಸಂಬಂಧವಿಲ್ಲದ ಪಠ್ಯಗಳು ಮುಂತಾದವು ಮಕ್ಕಳನ್ನು ಶಾಲೆಯಿಂದ ವಿಮುಖರನ್ನಾಗಿಸುತ್ತವೆ. ನೀರಸವಾದ ಶಾಲಾ ಶಿಕ್ಷಣದ ಏಕತಾನತೆಯ ಬದಲು ಖುಷಿ ಕೊಡುವ ಇನ್ನಿತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಮಕ್ಕಳು ಬಯಸುತ್ತಾರೆ. ಮಕ್ಕಳ ದುಡಿಮೆಯನ್ನು ಸಮರ್ಥಿಸಿಕೊಳ್ಳುವ ವಯಸ್ಕರು ಕುಟುಂಬಗಳಲ್ಲಿ ಮತ್ತು ಸಮಾಜದಲ್ಲಿ ಇರುತ್ತಾರೆ. ಅವರ ಮಾತುಗಳನ್ನು ಮಕ್ಕಳು ನಂಬುತ್ತಾರೆ. ದುಡಿಮೆ ತನ್ನ ಆಯ್ಕೆ ಎನ್ನುವ ರೀತಿಯಲ್ಲಿ ವರ್ತಿಸುತ್ತಾರೆ.

ಕೆಲಸ ಕೇಳಿ ಮಕ್ಕಳು ಬಂದರೆ, ಅವರನ್ನು ಸಂಘಸಂಸ್ಥೆಗಳು ನಡೆಸುತ್ತಿರುವ ಶಾಲೆಗಳಿಗೆ ಕಳುಹಿಸುತ್ತೇನೆ. ಪೋಷಕರಿಗೆ ಕಿವಿಮಾತು ಹೇಳುತ್ತೇನೆ. ನಮ್ಮ ಅಂಗಡಿ ಮಾಲೀಕರ ಸಂಘದ ಯಾವ ಸದಸ್ಯರೂ ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಳ್ಳುವುದಿಲ್ಲ.

**ವೆಂಕಟೇಶಪ್ಪ,** ಅಂಗಡಿ ಮಾಲೀಕ,
ಚಿಗಟೇರಿ, ದಾವಣಗೆರೆ.

## ಮೌ ಮಂಡಲ್‌ಗೆ ಹೊಸ ಬಾಳು :
## ನಿವಾಸಿಗಳ ಸಂಘದ ದಿಟ್ಟ ಹೆಜ್ಜೆ

ಪಶ್ಚಿಮ ಬಂಗಾಳದ ನ್ಯೂ ಆಲಿಪೂರ್‌ನಲ್ಲಿರುವ ಫ್ಲಾಟೊಂದರಲ್ಲಿ 10 ವರ್ಷದ ಮೌ ಮಂಡಲ್ ಎಂಬ ಬಾಲಕಿ ಬಂದಿಯಾಗಿದ್ದಳು. ಮನೆಯಲ್ಲಿ ಕೆಲಸಕ್ಕಿದ್ದ ಮೌಳನ್ನು ಕೊಠಡಿಯೊಂದರಲ್ಲಿ ಕೂಡಿ ಹಾಕಿ, ಮನೆ ಒಡೆತಿ ಮೈತ್ರೇಯಿ ಬ್ಯಾನರ್ಜಿ ತನ್ನ ಇಬ್ಬರು ಮಕ್ಕಳೊಂದಿಗೆ ದಸರಾ ರಜೆಗೆ ಬೆಂಗಳೂರಿಗೆ ತೆರಳಿದರು. ಮೌ ಬಳಿ ಇದ್ದದ್ದು ಎರಡು ಬಿಸ್ಕಟ್ ಪೊಟ್ಟಣಗಳು ಮಾತ್ರ. ಮೊದಲನೆಯ ದಿನ ಅದನ್ನು ತಿಂದು ನಲ್ಲಿ ನೀರು ಕುಡಿದಳು. ಎರಡನೆಯ ದಿನ ತಿನ್ನಲು ಏನೂ ಇಲ್ಲ. ಮೂರನೆಯ ದಿನ ಅವಳಿಗೆ ಮೇಲೇಳಲೂ ಆಗುತ್ತಿರಲಿಲ್ಲ. ಈ ಮಗುವಿನ ಅಳು ಮತ್ತು ಕಿರುಚಾಟ ಕೇಳಿದ ನೆರೆಹೊರೆಯವರಿಗೆ ಅನುಮಾನವಾಯಿತು. ಅವರು ಅಲ್ಲಿನ ನಿವಾಸಿಗಳ ಸಂಘವಾದ ರೆಸಿಡೆನ್ಶಿಯಲ್ ವೆಲ್‌ಫೇರ್ ಅಸೋಸಿಯೇಶನನ್ನು ಸಂಪರ್ಕಿಸಿದರು. ಕೂಡಲೇ ಕಾರ್ಯಪ್ರವೃತ್ತರಾದ ಸಂಘದ ಪದಾಧಿಕಾರಿಗಳು ಪೊಲೀಸರಿಗೆ ವಿಷಯ ತಿಳಿಸಿದರು. ನ್ಯೂ ಆಲಿಪೂರ್ ಪೊಲೀಸ್ ಬಂದು ಮನೆ ಬೀಗ ಮುರಿದು ಮಗುವನ್ನು ರಕ್ಷಿಸಿದರು. ಆಗ ಪ್ರಜ್ಞೆ ಇಲ್ಲದ ಸ್ಥಿತಿಯಲ್ಲಿ ಮೌ ನೆಲದ ಮೇಲೆ ಬಿದ್ದಿದ್ದಳು. ಮೈತ್ರೇಯಿ ಬ್ಯಾನರ್ಜಿ ವಿರುದ್ಧ ಅಪ್ರಾಪ್ತ ಬಾಲಕಿಯನ್ನು ಕೂಡಿಹಾಕಿದ ಅಪರಾಧಕ್ಕೆ ಐಪಿಸಿ 342 ಪ್ರಕಾರ ಪೊಲೀಸ್ ಪ್ರಕರಣ ದಾಖಲಿಸಿತು. ಮಗುವಿಗೆ ಅಲ್ಲಿನ ಸಂಸ್ಥೆಯೊಂದರ ವಸತಿಗೃಹದಲ್ಲಿ ಪುನರ್ವಸತಿ ಕಲ್ಪಿಸಲಾಯಿತು. ಬಾಲಕಿಯ ತಂದೆ ಅಮಲ್ ಮಂಡಲ್ ಐದು ವರ್ಷದ ಹಿಂದೆ ಎರಡನೆ ಮದುವೆಯಾಗಿದ್ದ ಸ್ವಲ್ಪ ಸಮಯದ ನಂತರ ಮೌಳ ತಾಯಿ ಮನೆ ಬಿಟ್ಟು ಹೊರಟು ಹೋದಳು. ಅನಾಥಳಾದ ಮೌ ಮಾವನ ಆಶ್ರಯ ಪಡೆದಳು. ಮಾವ ಅವಳನ್ನು ಮನೆಕೆಲಸಕ್ಕೆ ಸೇರಿಸಿದರು. ಕೊನೆಗೂ ಮೌ ಮಂಡಲ್‌ಗೆ ಶಿಕ್ಷಣ ಪಡೆಯಲು ಬಾಲ್ಯವನ್ನು ಸವಿಯಲು ಅವಕಾಶ ದೊರೆತಿದೆ.



## ಭಾರತದ ಸಂವಿಧಾನದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆ

ಭಾರತದ ಸಂವಿಧಾನವು ಮಕ್ಕಳ ಹಕ್ಕುಗಳ ಪರವಾಗಿದೆ. ಈ ಕೆಳಕಂಡ ಅನುಚ್ಛೇದಗಳು ಮಕ್ಕಳ ಮೂಲಭೂತ ಹಕ್ಕುಗಳನ್ನು ಎತ್ತಿಹಿಡಿಯುತ್ತವೆ ಮತ್ತು ಅಪಾಯಕಾರಿ ಕ್ಷೇತ್ರಗಳಲ್ಲಿ ಮಕ್ಕಳು ದುಡಿಯುವುದನ್ನು ನಿರ್ಬಂಧಿಸುತ್ತವೆ.

**ಅನುಚ್ಛೇದ 21 :** ಎಲ್ಲರಿಗೂ ಬದುಕುವ ಹಕ್ಕು. (ಆಹಾರ, ವಸತಿ, ಕುಡಿಯುವ ನೀರು ಇತ್ಯಾದಿ)

**ಅನುಚ್ಛೇದ 21ಎ :** 6 ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ.

(ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಕಾರ್ಯನಿರತರಾಗಿರುವ ಸಂಘ ಸಂಸ್ಥೆಗಳು ಮತ್ತು ಒಕ್ಕೂಟಗಳ ನಿರಂತರವಾದ ಚಳುವಳಿಯ ಪರಿಣಾಮವಾಗಿ ಈ ಮೂಲಭೂತ ಹಕ್ಕು 2002ರಲ್ಲಿ ಸಂವಿಧಾನದಲ್ಲಿ ಸೇರ್ಪಡೆಯಾಯಿತು. ಶಿಕ್ಷಣದ ಹಕ್ಕು ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಯಲ್ಲಿ ಬಹಳ ಮಹತ್ವ ಹೊಂದಿದೆ.)

**ಅನುಚ್ಛೇದ 23 :** ಮಾನವ ದುರ್ವ್ಯವಹಾರ ಮತ್ತು ಬಲಾತ್ಕಾರ ದುಡಿಮೆಯ ನಿಷೇಧ

**ಅನುಚ್ಛೇದ 24 :** ಕಾರ್ಖಾನೆ ಇತ್ಯಾದಿ ಅಪಾಯಕಾರಿ ಕ್ಷೇತ್ರಗಳಲ್ಲಿ ಮಕ್ಕಳ ದುಡಿಮೆಗೆ ನಿಷೇಧ

**ಅನುಚ್ಛೇದ 39 (ಇ) :** ಪುರುಷ ಮತ್ತು ಮಹಿಳಾ ಕೆಲಸಗಾರರ ಆರೋಗ್ಯ ಮತ್ತು ಬಲವನ್ನು ಹಾಗೂ ಮಕ್ಕಳ ಎಳೆಯ ವಯಸ್ಸನ್ನು ದುರುಪಯೋಗ ಪಡಿಸಿಕೊಳ್ಳಬಾರದು.

**ಅನುಚ್ಛೇದ 39 (ಎಫ್) :** ಆರೋಗ್ಯಕರವಾದ ರೀತಿಯಲ್ಲಿ ಮತ್ತು ಸ್ವತಂತ್ರ ಹಾಗೂ ಘನತೆಯ ಪರಿಸರದಲ್ಲಿ ಬೆಳೆಯಲು ಮಕ್ಕಳಿಗೆ ಅವಕಾಶ ಮತ್ತು ಅನುಕೂಲತೆಗಳು ದೊರೆಯುವಂತೆ ಹಾಗೂ ಬಾಲ್ಯ ಮತ್ತು ಯೌವ್ವನ ಸ್ಥಿತಿಯಲ್ಲಿರುವವರಿಗೆ ಶೋಷಣೆಯ ವಿರುದ್ಧ ಮತ್ತು ನೈತಿಕ ಹಾಗೂ ಪ್ರಾಪಂಚಿಕ ಭ್ರಷ್ಟತೆಯ ವಿರುದ್ಧ ಸಂರಕ್ಷಣೆ ನೀಡುವಂತೆ ಕಾರ್ಯನೀತಿಯನ್ನು ರೂಪಿಸಬೇಕು.

**ಅನುಚ್ಛೇದ 45 :** 6 ವರ್ಷದೊಳಗಿನ ಮಕ್ಕಳಿಗೆ ಪೋಷಣೆ ಮತ್ತು ಶಿಕ್ಷಣ ನೀಡುವುದು.

ಇದಲ್ಲದೆ, ಅನುಚ್ಛೇದ 41 ಮತ್ತು 46, ದುರ್ಬಲರು ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರಿಗೆ ಶಿಕ್ಷಣ, ಕೆಲಸ, ವಿಶೇಷ ನೆರವು ನೀಡಬೇಕೆಂದು ಹೇಳುತ್ತವೆ.

## ಬಾಲಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986

ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ 1986ರಲ್ಲಿ ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ ಭಾರತದಲ್ಲಿ ಜಾರಿಯಾಯಿತು. ಈ ಕಾಯ್ದೆ ಪ್ರಕಾರ 14 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ನೇಮಕ ಮಾಡುವುದು ಅಪರಾಧ. ಕಲಂ 3ರಲ್ಲಿ ಕೆಲಸದ ಕ್ಷೇತ್ರಗಳನ್ನು ಎರಡು ಭಾಗವಾಗಿ ಪಟ್ಟಿ ಮಾಡಲಾಗಿದೆ. ಭಾಗ 'ಎ' ಯಲ್ಲಿ 15 ಉದ್ಯೋಗಗಳನ್ನು ಮತ್ತು ಭಾಗ 'ಬಿ'ಯಲ್ಲಿ 57 ಪ್ರಕ್ರಿಯೆಗಳನ್ನು ಅಪಾಯಕಾರಿ ಎಂದು ಗುರುತಿಸಲಾಗಿದೆ. ಹೊಟೆಲ್, ರಸ್ತೆ ಬದಿ ಡಾಬಾ, ಟೀ ಅಂಗಡಿಗಳು, ಮನೆಕೆಲಸ ಇವು ಇತ್ತೀಚೆಗೆ ಸೇರ್ಪಡೆಯಾದ ಉದ್ದಿಮೆಗಳು. ಈ ಉದ್ದಿಮೆಗಳಲ್ಲಿ ಮಕ್ಕಳನ್ನು

### ಮಾಲೀಕರಿಗೆ ದಂಡ

ಮಕ್ಕಳನ್ನು ದುಡಿಸುತ್ತಿದ್ದ ಮಾಲೀಕರ ಮೇಲೆ ದಾವಣಗೆರೆಯ ಕಾರ್ಮಿಕ ಇಲಾಖೆಯು ಕಠಿಣವಾದ ಕ್ರಮ ಜರುಗಿಸಿತು. 2004-2007ರ ಅವಧಿಯಲ್ಲಿ 89 ಮಾಲಿಕರಿಗೆ 1986ರ ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯಡಿ ತಲಾ ರೂ. 10,000. ಸರ್ವೋಚ್ಚ ನ್ಯಾಯಾಲಯದ 1996ರ ತೀರ್ಪಿನನ್ವಯ 58 ಮಾಲಿಕರಿಗೆ ತಲಾ ರೂ. 20,000 ದಂಡ ವಿಧಿಸಲಾಯಿತು. ಯುನಿಸೆಫ್-ನೊರಾಡ್ ಯೋಜನೆ, ಕಾರ್ಮಿಕ ಇಲಾಖೆ, ಸಂಘ ಸಂಸ್ಥೆಗಳು, ಪೊಲೀಸ್ ಇಲಾಖೆ, ಇತರೆ ಅಧಿಕಾರಿಗಳ ಜಂಟಿ ಕಾರ್ಯಾಚರಣೆಯಲ್ಲಿ ಈ ಮಾಲೀಕರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಯಿತು.

ದುಡಿಸಿದರೆ ಮಾಲೀಕರಿಗೆ ರೂ. 20,000 ದಂಡ ಅಥವಾ ಒಂದು ವರ್ಷ ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಕಾರ್ಮಿಕ ಇಲಾಖೆಯು ಈ ಕಾಯ್ದೆಯನ್ನು ಜಾರಿ ಮಾಡುತ್ತಿದೆ. ಇದಲ್ಲದೆ, 11 ಇಲಾಖೆಗಳ ಅಧಿಕಾರಿಗಳನ್ನು ಈ ಕಾಯ್ದೆಯ ಕಲಂ 17 ರನ್ವಯ ನಿರೀಕ್ಷಕರಾಗಿ ನೇಮಕ ಮಾಡಲಾಗಿದೆ. ಇದರಂತೆ ತಹಸೀಲ್ದಾರರು, ಕಾರ್ಯನಿರ್ವಹಣಾಧಿಕಾರಿಗಳು (ಇಓ), ಬಿಇಓ, ಸಿಡಿಪಿಓ, ಆರೋಗ್ಯ ನಿರೀಕ್ಷಕರು, ಪುರಸಭಾ ಮುಖ್ಯಾಧಿಕಾರಿಗಳು ಮುಂತಾದವರು ವಿಶೇಷವಾಗಿ ನೇಮಕಗೊಂಡಿದ್ದಾರೆ. ಕೆಲಸದ ಸ್ಥಳಗಳನ್ನು ಪರಿಶೀಲಿಸಿ ಬಾಲಕಾರ್ಮಿಕರು ಇದ್ದಲ್ಲಿ ಮಾಲೀಕರ ಮೇಲೆ ಮೊಕದ್ದಮೆ ಹೂಡಲು ನಿರೀಕ್ಷಕರಿಗೆ ಅಧಿಕಾರ ಇರುತ್ತದೆ.

## ಮಕ್ಕಳ ನ್ಯಾಯ (ಪೋಷಣೆ ಮತ್ತು ರಕ್ಷಣೆ)<br>ತಿದ್ದುಪಡಿ ಕಾಯ್ದೆ – 2006

ಈ ಕಾಯ್ದೆಯು ಮಕ್ಕಳ ಪೋಷಣೆ ಮತ್ತು ರಕ್ಷಣೆ ವಿಚಾರದಲ್ಲಿ ಇರಿಸಲಾದ ಪ್ರಗತಿಪರ ಹೆಜ್ಜೆಯಾಗಿದೆ. 18 ವರ್ಷದೊಳಗಿನ ಎಲ್ಲಾ ಮಕ್ಕಳು ಈ ಕಾಯ್ದೆಯ ವ್ಯಾಪ್ತಿಯಲ್ಲಿ ಬರುತ್ತಾರೆ. ಈ ಮಕ್ಕಳನ್ನು ಎರಡು ವಿಭಾಗ ಮಾಡಲಾಗಿದೆ : 1) ಕಾನೂನಿನೊಡನೆ ಸಂಘರ್ಷಕ್ಕೊಳಗಾದವರು ಹಾಗೂ 2) ಪೋಷಣೆ ಮತ್ತು ರಕ್ಷಣೆ ಅಗತ್ಯವುಳ್ಳವರು. ಮೊದಲನೆಯ ಗುಂಪಿನ ಮಕ್ಕಳಿಗಾಗಿ ಬಾಲನ್ಯಾಯ ಮಂಡಳಿ ಮತ್ತು ಎರಡನೆಯ ಗುಂಪಿನ ಮಕ್ಕಳಿಗಾಗಿ ಮಕ್ಕಳ ಕಲ್ಯಾಣ ಸಮಿತಿ ರಚಿಸಲಾಗಿದೆ. ಇವುಗಳ ಸದಸ್ಯರು ಸರ್ಕಾರದಿಂದ ನೇಮಿಸಲ್ಪಡುತ್ತಾರೆ. ಈ ಕಾಯ್ದೆಯ ಜಾರಿಯಲ್ಲಿ ನಾಗರಿಕರ ಮತ್ತು ಸಂಘ ಸಂಸ್ಥೆಗಳ ಸಹಭಾಗಿತ್ವ ಅಳವಡಿಸಲಾಗಿದೆ. ಈ ವ್ಯವಸ್ಥೆಯನ್ನು ಜಾರಿ ಮಾಡುವ ಜವಾಬ್ದಾರಿಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ನೀಡಲಾಗಿದೆ.

ತಪ್ಪು ಮಾಡಿದ ಮಕ್ಕಳನ್ನು 'ಬಾಲಾಪರಾಧಿಗಳು' ಎಂದೇ ಹಿಂದೆ ಕರೆಯಲಾಗುತ್ತಿತ್ತು. ಆದರೆ, 2000ದಲ್ಲಿ ಜಾರಿಗೆ ಬಂದ ಹೊಸ ಕಾಯ್ದೆಯ ಪ್ರಕಾರ ಈ ಪದ ಬಳಸುವುದನ್ನು ನಿಷೇಧಿಸಲಾಗಿದೆ. ಇಂತಹ ಮಕ್ಕಳನ್ನು 'ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಕ್ಕಳು' ಎಂದೇ ಕರೆಯಬೇಕು. 'ರಿಮ್ಯಾಂಡ್ ಹೋಂ' ಈಗ 'ಮಕ್ಕಳ ವೀಕ್ಷಣಾಲಯ'ವಾಗಿ ಪರಿವರ್ತನೆಗೊಂಡಿದೆ. ಮಕ್ಕಳಿಗೆ ತಾವು ಮಾಡುತ್ತಿರುವುದು ತಪ್ಪು ಎಂಬ ತಿಳುವಳಿಕೆ ಇರುವುದಿಲ್ಲ. ಮಕ್ಕಳು ಬೆಳೆಯುವ ಪರಿಸರ ಮತ್ತು ಅದರಿಂದಾಗಿ ಅವರಲ್ಲಿ ರೂಪುಗೊಳ್ಳುವ ಬದುಕಿನ ಮೌಲ್ಯಗಳು ಸರಿ ತಪ್ಪುಗಳ ಬಗೆಗೆ ತಮ್ಮದೇ ಆದ ಪರಿಕಲ್ಪನೆಗಳನ್ನು ಕಟ್ಟಿಕೊಟ್ಟಿರುತ್ತವೆ. ಆದುದರಿಂದ ಇಂತಹ ಮಕ್ಕಳಿಗೆ ಶಿಕ್ಷೆಯ ಬದಲಿಗೆ ಸೂಕ್ತ ಪುನರ್ವಸತಿ, ಆಪ್ತಸಮಾಲೋಚನೆ, ಪ್ರೀತಿ ಮತ್ತು ಧೈರ್ಯ ನೀಡುವಂತಹ ವಾತಾವರಣ ಅಗತ್ಯ



ಎನ್ನುವ ಪರಿಕಲ್ಪನೆಯಲ್ಲಿ ಹೊಸ ಕಾನೂನನ್ನು ರಚಿಸಲಾಗಿದೆ. ಮಕ್ಕಳ ಕಲ್ಯಾಣ ಮತ್ತು ಸೂಕ್ತ ರಕ್ಷಣಾ ಕ್ರಮಗಳು ಈ ಕಾನೂನಿನ ಗುರಿಯಾಗಿದೆ.

ಮಕ್ಕಳ ಕೈಗಳಿಗೆ ಬೇಡಿ ತೊಡಿಸುವುದು ಮತ್ತು ಮಕ್ಕಳಿಗೆ ಮರಣದಂಡನೆ ವಿಧಿಸುವುದನ್ನು ನಿಷೇಧಿಸಲಾಗಿದೆ. ಮಕ್ಕಳನ್ನು ವಿಚಾರಣೆ ನಡೆಸುವ ಸಂದರ್ಭದಲ್ಲಿ ಪೊಲೀಸರು, ವಕೀಲರು, ಮಂಡಳಿ / ಸಮಿತಿ ಸದಸ್ಯರು ಸಮವಸ್ತ್ರ ಧರಿಸುವಂತಿಲ್ಲ. ಮಕ್ಕಳಿಗೆ ಹಿತವಾದ ವಾತಾವರಣವನ್ನು ಕಲ್ಪಿಸಬೇಕು. ಸೂರ್ಯಾಸ್ತದಿಂದ ಸೂರ್ಯೋದಯದ ಅವಧಿಯಲ್ಲಿ ಮಕ್ಕಳನ್ನು ಪೊಲೀಸ್ ಠಾಣೆಗಳಲ್ಲಿ ಯಾವುದೇ ಕಾರಣಕ್ಕೂ ಇಟ್ಟುಕೊಳ್ಳಬಾರದು. ಅವರನ್ನು ವೀಕ್ಷಣಾಲಯ ಅಥವಾ ಬಾಲಮಂದಿರಕ್ಕೆ ಕಳುಹಿಸಬೇಕಾಗುತ್ತದೆ. ಮಕ್ಕಳ ವಿಚಾರಣೆ ನಡೆಸಲು ಪೊಲೀಸರಿಗೆ ಯಾವುದೇ ಅಧಿಕಾರ ಇರುವುದಿಲ್ಲ. ವಿಶೇಷ ತರಬೇತಿ ಪಡೆದ ಪೊಲೀಸ್ ಅಧಿಕಾರಿ ಮಾತ್ರ ಮಕ್ಕಳನ್ನು ಆಪ್ತಸಮಾಲೋಚನೆ ನಡೆಸಿ, ಸಮಿತಿ ಅಥವಾ ಮಂಡಳಿ ಮುಂದೆ ಹಾಜರುಪಡಿಸಬಹುದು.

## ಬಾಲನ್ಯಾಯ ಮಂಡಳಿ (Juvenile Justice Board)

ಒಬ್ಬ ಮಹಿಳೆ ಸೇರಿದಂತೆ ಮೂರು ಸದಸ್ಯರನ್ನೊಳಗೊಂಡ ವಿಶೇಷ ನ್ಯಾಯಾಂಗ ಪೀಠ ಇದು. ಹಾಲಿ ಸೇವೆಯಲ್ಲಿರುವ ಮುಖ್ಯ ಸಿವಿಲ್ ನ್ಯಾಯಾಧೀಶರು ಮಂಡಳಿಯ ಅಧ್ಯಕ್ಷರಾಗಿರುತ್ತಾರೆ. ಮಂಡಳಿಯನ್ನು ಮೂರು ವರ್ಷಕ್ಕೊಮ್ಮೆ ಪುನರ್‌ರಚಿಸಲಾಗುತ್ತದೆ. ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಕ್ಕಳ ಪ್ರಕರಣಗಳನ್ನು ಪೊಲೀಸ್ ಠಾಣೆಗಳ ಮೂಲಕ ಇತ್ಯರ್ಥಕ್ಕಾಗಿ ಈ ಮಂಡಳಿಯ ಮುಂದೆ ಸಲ್ಲಿಸಲಾಗುತ್ತದೆ. ಯಾವುದೇ ಕಾರಣಕ್ಕೂ 18 ವರ್ಷದೊಳಗಿನ ಮಕ್ಕಳನ್ನು ಸಾಮಾನ್ಯ ನ್ಯಾಯಾಲಯದ ಮುಂದೆ ಕರೆದೊಯ್ಯಲು ಈ ಕಾನೂನಿನ ಪ್ರಕಾರ

ಅವಕಾಶ ಇಲ್ಲ. ವಯಸ್ಕರೊಂದಿಗೆ ತಪ್ಪು ಮಾಡಿದವರಲ್ಲಿ ಮಕ್ಕಳು ಸೇರಿದ್ದರೆ, ಅಂತಹ ಪ್ರಕರಣಗಳನ್ನು ವಿಭಾಗ ಮಾಡಿ ಮಕ್ಕಳನ್ನು ಮಂಡಳಿ ಮುಂದೆಯೂ ವಯಸ್ಕರನ್ನು ಸಾಮಾನ್ಯ ನ್ಯಾಯಾಲಯದ ಮುಂದೆಯೂ ಹಾಜರುಪಡಿಸುವುದು ಪೊಲೀಸರ ಕರ್ತವ್ಯ. ಮಕ್ಕಳನ್ನು ಯಾವುದೇ ಕಾರಣಕ್ಕೂ ಕಾರಾಗೃಹಕ್ಕೆ ಕಳುಹಿಸಲು ಅವಕಾಶವಿಲ್ಲ. ಅವರ ಪುನರ್ವಸತಿಗಾಗಿ ರಚಿಸಲ್ಪಟ್ಟಿರುವ ವೀಕ್ಷಣಾಲಯಗಳಿಗೆ ಅಥವಾ ಬಾಲಮಂದಿರಕ್ಕೆ ಮಾತ್ರ ಅವರನ್ನು ದಾಖಲು ಮಾಡಬೇಕು. 23, 24, 25, 26 ಕಲಂಗಳು ಮಕ್ಕಳ ಮೇಲೆ ನಡೆಯುತ್ತಿರುವ ಕ್ರೌರ್ಯ, ಸಾಗಾಣಿಕೆ, ಭಿಕ್ಷಾಟನೆ, ಬಾಲಕಾರ್ಮಿಕತೆ ವಿರುದ್ಧ ಕ್ರಮ ಜರುಗಿಸಲು ಮಂಡಳಿಗೆ ಅಧಿಕಾರ ನೀಡಿರುತ್ತದೆ (ಜೆಜೆ ಕೇಂದ್ರ ನಿಯಮಗಳು 2007, ಕಲಂ 10 ಬಿ). ಮಕ್ಕಳನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ದುಡಿಸುವವರಿಗೆ ಕಲಂ 26ರ ಪ್ರಕಾರ 3 ವರ್ಷದ ಜೈಲು ಶಿಕ್ಷೆ ಮತ್ತು ದಂಡ ವಿಧಿಸಬಹುದಾಗಿದೆ. ಹಾಗೆಯೇ ಮಕ್ಕಳನ್ನು ಭಿಕ್ಷಾಟನೆಯಲ್ಲಿ ತೊಡಗಿಸುವುದು ಕೂಡಾ ಅಷ್ಟೇ ದೊಡ್ಡ ಪ್ರಮಾಣದ ಅಪರಾಧ.

ರಾಜ್ಯದಲ್ಲಿ ಈಗ 8 ಬಾಲನ್ಯಾಯ ಮಂಡಳಿಗಳು ಕೆಲಸ ಮಾಡುತ್ತಿವೆ. ಪ್ರತಿಯೊಂದು ಜಿಲ್ಲೆಯಲ್ಲೂ ಇಂತಹ ಮಂಡಳಿಗಳನ್ನು ರಚಿಸುವ ಪ್ರಕ್ರಿಯೆಯನ್ನು ಸರ್ಕಾರ ಈಗಾಗಲೇ ಪ್ರಾರಂಭ ಮಾಡಿದೆ.

### ಮಕ್ಕಳ ಕಲ್ಯಾಣ ಸಮಿತಿ (Child Welfare Committee)

ಕರ್ನಾಟಕದ ಪ್ರತಿ ಜಿಲ್ಲೆಯಲ್ಲೂ ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲಿಯುಸಿ) ರಚಿಸಲಾಗಿದೆ. 3 ವರ್ಷಕ್ಕೊಮ್ಮೆ ಇದನ್ನು ಪುನರ್‌ರಚಿಸಲಾಗುತ್ತದೆ. ಮಕ್ಕಳಿಗೆ ಸಂಬಂಧಿಸಿದ ವಿಚಾರಗಳಲ್ಲಿ ಕನಿಷ್ಠ 7 ವರ್ಷ ಅನುಭವ ಹೊಂದಿರುವ, ಜಿಲ್ಲೆಯ 5 ವ್ಯಕ್ತಿಗಳನ್ನು ಸಮಿತಿಗೆ ನೇಮಕ ಮಾಡಲಾಗುತ್ತದೆ. ಇವರಲ್ಲಿ ಒಬ್ಬರಾದರೂ ಮಹಿಳೆಯಾಗಿರಬೇಕು. ಪೋಷಣೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳನ್ನು ಸಮಿತಿಯ ಮುಂದೆ ಹಾಜರುಪಡಿಸಲಾಗುತ್ತದೆ. ಮಕ್ಕಳಿಗೆ ಅಗತ್ಯವಾದ ಆಪ್ತಸಮಾಲೋಚನೆ, ಪುನರ್ವಸತಿ ಮತ್ತು ಪೋಷಣೆಯನ್ನು ಒದಗಿಸುವುದು ಸಮಿತಿಯ ಆದ್ಯ ಕರ್ತವ್ಯಗಳಾಗಿವೆ. 18 ವರ್ಷದೊಳಗಿನ ಯಾವುದೇ ಮಗುವನ್ನು ಪುನರ್ವಸತಿಗಾಗಿ ಸಮಿತಿಯ ಮುಂದೆ ಹಾಜರುಪಡಿಸಬಹುದು. ಅನಾಥರು, ಪೋಷಕರಿಂದ ತ್ಯಜಿಸಲ್ಪಟ್ಟವರು, ದುರ್ಬಳಕೆಗೊಳಗಾದವರು, ಬಾಲಕಾರ್ಮಿಕರು, ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳು, ಮನೆಗಳಿಂದ ಓಡಿಬಂದವರು... ಇಂತಹ ಮಕ್ಕಳಿಗೆ ಸಮಿತಿಯು ಸೂಕ್ತ ಪುನರ್ವಸತಿ ಕಲ್ಪಿಸುತ್ತದೆ. ಇದಲ್ಲದೆ, ಮಕ್ಕಳನ್ನು ಹಿಂಸಿಸುವ, ದುರ್ಬಳಕೆ ಮಾಡುವ ಹಾಗೂ ದುಡಿಸುವವರನ್ನು ಕರೆಸಿ ಕ್ರಿಮಿನಲ್ ಮೊಕದ್ದಮೆ ಹೂಡುವ ಅಧಿಕಾರವನ್ನು ಸಮಿತಿಯು ಹೊಂದಿರುತ್ತದೆ.

ಮಕ್ಕಳನ್ನು ದತ್ತು ಪಡೆಯಬೇಕಾದರೆ, ಸಮಿತಿಯ ಒಪ್ಪಿಗೆ ಪಡೆಯಲೇ ಬೇಕಾಗುತ್ತದೆ. ಮಕ್ಕಳ ಪುನರ್ವಸತಿ ಕೇಂದ್ರಗಳಿಗೆ ಬೇಟಿ ನೀಡಿ ಪರಿಶೀಲಿಸುವುದು, ಮಕ್ಕಳ ಮೇಲಿನ ದೌರ್ಜನ್ಯಗಳ ವಿರುದ್ಧ ಕ್ರಮ ಜರುಗಿಸುವುದು ಸಮಿತಿಯ ಕರ್ತವ್ಯಗಳಾಗಿವೆ. ಮಕ್ಕಳ ಪುನರ್ವಸತಿಗೆ ಸೂಕ್ತವಾದ ಸಂಘಸಂಸ್ಥೆಗಳನ್ನು 'ಅರ್ಹ ಸಂಸ್ಥೆ' ಮಾನ್ಯತೆಗಾಗಿ ಶಿಫಾರಸ್ಸು ಮಾಡುವುದು ಮತ್ತು 'ಅರ್ಹ ವ್ಯಕ್ತಿ'ಗಳನ್ನು ಘೋಷಿಸುವುದು ಸಮಿತಿಯ ಕಾರ್ಯಗಳಲ್ಲಿ ಕೆಲವು.

ಕಲಂ 21ರ ಪ್ರಕಾರ ಶೋಷಿತ ಮಕ್ಕಳ ಗುರುತಿಗೆ ಎಡೆಮಾಡಿಕೊಡುವಂತಹ ಹೆಸರು, ವಿಳಾಸ, ಭಾವಚಿತ್ರ ಅಥವಾ ಇನ್ನತರೆ ವಿವರಗಳನ್ನು ಮಾಧ್ಯಮಗಳಲ್ಲಿ ಪ್ರಕಟಿಸುವುದು ನಿಷೇಧಿಸಲಾಗಿದೆ. ಇಂತಹ ಅಪರಾಧಕ್ಕೆ ರೂ.25000 ದಂಡ ವಿಧಿಸಬಹುದಾಗಿದೆ.

ಬಾಲಕಾರ್ಮಿಕ ಪದ್ಧತಿಯ ವಿರುದ್ಧದ ಹೋರಾಟಕ್ಕೆ ಮಕ್ಕಳ ಕಲ್ಯಾಣ ಸಮಿತಿಯು ಸ್ಪೂರ್ತಿ ನೀಡುತ್ತದೆ. ಕಾರ್ಮಿಕ ಇಲಾಖೆ ಅಧಿಕಾರಿಗಳ ಪರಿಧಿಗೆ 14 ವರ್ಷದೊಳಗಿನ ಮಕ್ಕಳು ಮಾತ್ರ ಒಳಪಟ್ಟರೆ, ಸಮಿತಿಯ ಮುಂದೆ 18 ವರ್ಷದೊಳಗಿನ ಎಲ್ಲ ಮಕ್ಕಳೂ ಒಳಪಡುತ್ತಾರೆ. ನಾಗರಿಕ ಸಂಘ ಸಂಸ್ಥೆಗಳ ಸಹಕಾರ ದೊರಕಿದ್ದರೆ, ಸಮಿತಿಯು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತದೆ. ಮಕ್ಕಳ ಪುನರ್ವಸತಿಗಾಗಿ ಗಂಡು ಮತ್ತು ಹೆಣ್ಣುಮಕ್ಕಳ ಬಾಲಮಂದಿರಗಳು, ಶಿಶುಮಂದಿರಗಳು ಇರುತ್ತವೆ. ಆಯಾಯ ಜಿಲ್ಲೆಯ ನಾಗರಿಕ ಸಂಘ ಸಂಸ್ಥೆಗಳಿಗೆ / ಸ್ವಯಂ ಸೇವಾ ಸಂಸ್ಥೆಗಳಿಗೆ ಈ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಕಾಶವಿದೆ.

ಬೆಂಗಳೂರು ಮಕ್ಕಳ ಕಲ್ಯಾಣ ಸಮಿತಿಯಿಂದ 716 ಮಕ್ಕಳು ಕಳೆದ 2 ವರ್ಷದಲ್ಲಿ ಪುನರ್ವಸತಿಗೊಂಡಿದ್ದಾರೆ. ಹಾಗೆಯೇ ಮೈಸೂರು ಮಕ್ಕಳ ಕಲ್ಯಾಣ ಸಮಿತಿಯಿಂದ 716 ಮಕ್ಕಳಿಗೆ ಪುನರ್ವಸತಿ ಕಲ್ಪಿಸಲಾಗಿದೆ. ಹಲವು ಸಂಘ ಸಂಸ್ಥೆಗಳು ಮಕ್ಕಳನ್ನು ಸಮಿತಿ ಮುಂದೆ ಹಾಜರುಪಡಿಸಿ, ನ್ಯಾಯ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಾಲಕಾರ್ಮಿಕ ಪದ್ಧತಿ ನಮ್ಮ ಸಮಾಜದಲ್ಲಿ ವ್ಯಾಪಕಗೊಳ್ಳುತ್ತಲೇ ಇದೆ. ಇದು ಒಂದು ಕಡೆ ದೇಶದ ಪ್ರಗತಿಗೆ ಮಾರಕ. ಮತ್ತೊಂದು ಕಡೆ ಅಮಾನವೀಯ.

**ಡಾ. ಬಂಜಗೆರೆ ಜಯಪ್ರಕಾಶ,**
ಕವಿ ಮತ್ತು ಲೇಖಕ, ಹಾರೋಹಳ್ಳಿ.

# ವಿಶೇಷ ಮಕ್ಕಳ ಪೊಲೀಸ್ ಘಟಕ

(Special Juvenile Police Unit -SJPU)

ಪ್ರತಿ ಜಿಲ್ಲೆಯಲ್ಲಿ ವಿಶೇಷ ಮಕ್ಕಳ ಪೊಲೀಸ್ ಘಟಕ ರಚನೆಯಾಗಬೇಕೆಂದು ಕಾಯ್ದೆಯು ಹೇಳುತ್ತದೆ. ಇದರಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಮತ್ತು ಮಹಿಳೆಯೊಬ್ಬರು ಸೇರಿದಂತೆ ಇಬ್ಬರು ಸಮಾಜ ಸೇವಕರು ಸದಸ್ಯರಾಗಿ ಇರುತ್ತಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಈ ಘಟಕದ ಮೇಲ್ವಿಚಾರಣೆಯನ್ನು ನಡೆಸುತ್ತಾರೆ. ರಾಜ್ಯ ಮಟ್ಟದಲ್ಲಿ ಐಜಿಪಿ ರ್‍ಯಾಂಕಿನ ಪೊಲೀಸ್ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಬೇಕು. ಸರ್ಕಾರದಿಂದ ಮಾನ್ಯತೆ ಪಡೆದಿರುವ ಸ್ವಯಂ ಸೇವಾ ಸಂಸ್ಥೆಗಳ ನೆರವನ್ನು ವಿಶೇಷ ಮಕ್ಕಳ ಪೊಲೀಸ್ ಘಟಕಗಳು ಪಡೆಯಬಹುದಾಗಿದೆ. ಮಕ್ಕಳನ್ನು ಬಂಧಿಸುವ ಸಂದರ್ಭದಲ್ಲಿ, ಸಂಬಂಧಿಸಿದ ವರದಿ ತಯಾರಿಸುವಲ್ಲಿ ಮತ್ತು ಮಂಡಳಿ ಮುಂದೆ ಹಾಜರುಪಡಿಸುವ ವೇಳೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ನೆರವು ಪಡೆಯಬಹುದು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯ ಕಛೇರಿಯ ಆವರಣದಲ್ಲಿ ಈ ಘಟಕ ಕಾರ್ಯ ನಿರ್ವಹಿಸಬೇಕಾಗುತ್ತದೆ. 18 ವರ್ಷದೊಳಗಿನ ಮಕ್ಕಳು ಈ ಘಟಕದ ವ್ಯಾಪ್ತಿಗೆ ಬರುತ್ತಾರೆ. ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳೊಂದಿಗೆ ಈ ಘಟಕವು ಸಂಪರ್ಕದಲ್ಲಿರಬೇಕು. ಮಕ್ಕಳ ಮೇಲೆ ಅಪರಾಧ ಎಸಗಿದವರನ್ನು ವಿಳಂಬವಿಲ್ಲದೆ ಬಂಧಿಸಿ ಕಾನೂನು ಕ್ರಮ ಜರುಗಿಸುವುದು ಈ ಘಟಕದ ಕರ್ತವ್ಯವಾಗಿದೆ. ಈಗ, ರಾಜ್ಯದಲ್ಲಿ ಬೆಂಗಳೂರಿನಲ್ಲಿ ಮಾತ್ರ ಇಂತಹ ಪೊಲೀಸ್ ಘಟಕ ರಚನೆಯಾಗಿದೆ.

ಪ್ರತಿಯೊಂದು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಅಧಿಕಾರಿಯೊಬ್ಬರು 'ಮಕ್ಕಳ ಕಲ್ಯಾಣ ಅಧಿಕಾರಿ'ಯೆಂದು ನೇಮಿಸಲ್ಪಡುತ್ತಾರೆ. ಈ ಅಧಿಕಾರಿಯು ಮಕ್ಕಳ ವಿಚಾರಗಳಲ್ಲಿ ಸೂಕ್ತ ತರಬೇತಿ ಪಡೆದಿರಬೇಕು. ಈ ಅಧಿಕಾರಿಯು ಪೊಲೀಸ್ ಠಾಣಾದಲ್ಲಿ ಬರುವಂತಹ ಮಕ್ಕಳೊಂದಿಗೆ ಆಪ್ತಸಮಾಲೋಚನೆ ನಡೆಸಿ ವರದಿ ತಯಾರಿಸಿ ಅವರನ್ನು ಸಮಿತಿ ಅಥವಾ ಮಂಡಳಿ ಮುಂದೆ ಹಾಜರು ಪಡಿಸಬೇಕಾದದ್ದು ಈ ಅಧಿಕಾರಿಯ ಕರ್ತವ್ಯವಾಗಿರುತ್ತದೆ. ಮಕ್ಕಳೊಂದಿಗಿನ ಒಡನಾಟದ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಯು ಸಮವಸ್ತ್ರ ಧರಿಸುವುದನ್ನು ನಿಷೇಧಿಸಲಾಗಿದೆ. 18 ವರ್ಷದೊಳಗಿನ ಮಕ್ಕಳಿಗೆ ಮರಣ ದಂಡನೆ ನೀಡುವುದನ್ನು ಕೂಡಾ ಕಾಯ್ದೆಯು ನಿಷೇಧಿಸಿದೆ.

ಸ್ವಯಂ ಸೇವಾ ಸಂಸ್ಥೆಗಳಲ್ಲದೆ, ಪಂಚಾಯ್ತಿ, ಗ್ರಾಮಸಭೆ, ನಿವಾಸಿಗಳ ಕಲ್ಯಾಣ ಸಮಿತಿಯಂತಹ ಸಿಎಸ್‌ಓಗಳ ನೆರವನ್ನು ಮಕ್ಕಳ ವಿಶೇಷ ಪೊಲೀಸ್ ಘಟಕಗಳು ಪಡೆಯಬಹುದು. ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಕ್ಕಳನ್ನು

ಗುರುತಿಸುವುದರಲ್ಲಿ ಮತ್ತು ಮಕ್ಕಳ ಮೇಲಿನ ದೌರ್ಜನ್ಯಗಳು, ದುರ್ಬಳಕೆ ಬಾಲಕಾರ್ಮಿಕ ಪದ್ಧತಿ ಮುಂತಾದವುಗಳ ಕುರಿತು ಮಾಹಿತಿ ಪಡೆಯುವುದರಲ್ಲಿ ಸಿಎಸ್‌ಓಗಳು ನೆರವಾಗುತ್ತವೆ.

## ಅಂತಾರಾಷ್ಟ್ರೀಯ ಒಡಂಬಡಿಕೆಗಳು

ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ (ILO) ಒಡಂಬಡಿಕೆಗಳು – 138 & 182

ಅಂತಾರಾಷ್ಟ್ರೀಯು ಕಾರ್ಮಿಕ ಸಂಸ್ಥೆ(ಐಎಲ್‌ಓ)ಯು 1919ರಲ್ಲಿ ಸ್ಥಾಪನೆಯಾಯಿತು. ವಿಶ್ವಸಂಸ್ಥೆಯ ಮೊದಲನೆಯ ಅಂಗಸಂಸ್ಥೆ ಇದಾಗಿದೆ. ಬಾಲಕಾರ್ಮಿಕ ಪದ್ಧತಿ ಕುರಿತು 1919ರಲ್ಲಿ ನಡೆದ ಮೊದಲನೆಯ ಸಮ್ಮೇಳನದಲ್ಲಿಯೇ ಕೈಗಾರಿಕಾ ಘಟಕಗಳಲ್ಲಿ 14 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ನೇಮಿಸುವುದನ್ನು ಐಎಲ್‌ಓ ನಿಷೇಧಿಸಿದೆ. 182 ನೇ (ಹೀನಾಯ ಸ್ವರೂಪದ ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆ) ಮತ್ತು 138 ನೇ (ಉದ್ಯೋಗ ನೇಮಕಾತಿಯಲ್ಲಿ ಕನಿಷ್ಠ ವಯೋಮಾನ ನಿಗದಿಪಡಿಸುವಿಕೆ) ಒಡಂಬಡಿಕೆಗಳು ಈ ಕೆಳಗಿನ ಎರಡು ಪ್ರಮುಖ ಗುರಿಗಳನ್ನು ಹೊಂದಿವೆ:

1. ಸಾರ್ವತ್ರಿಕ ಕಲ್ಯಾಣ ಮತ್ತು ನಾಗರಿಕತೆಯ ವಿಕಾಸವನ್ನು ಖಾತರಿಪಡಿಸುವುದು.
2. ಒಡಂಬಡಿಕೆಗಳ ಅಂಶಗಳನ್ನು ಜಾರಿಮಾಡಲು ಸದಸ್ಯ ರಾಷ್ಟ್ರಗಳು ಪ್ರಮುಖ ಪಾತ್ರವಹಿಸುವಂತೆ ನೋಡಿಕೊಳ್ಳುವುದು ಮತ್ತು ಭಾಗೀದಾರರ (stakeholders) ಸಹಭಾಗಿತ್ವವನ್ನು ಖಾತರಿಪಡಿಸುವುದು.

## ಒಡಂಬಡಿಕೆ 138

1973ರಲ್ಲಿ ಈ ಒಡಂಬಡಿಕೆಯು ರೂಪಿಸಲಾಯಿತು. ಉದ್ಯೋಗ ನೇಮಕಾತಿಯಲ್ಲಿ ಕನಿಷ್ಠ ವಯೋಮಾನದ ನಿಗದಿಪಡಿಸಲು ಈ ಒಡಂಬಡಿಕೆಯು ಸರ್ಕಾರಗಳನ್ನು ಒತ್ತಾಯಿಸುತ್ತದೆ. ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಪರಿಣಾಮಕಾರಿಯಾದ ರಾಷ್ಟ್ರೀಯ ನೀತಿ ರೂಪಿಸಲು 138ನೇ ಒಡಂಬಡಿಕೆ ಹೇಳುತ್ತದೆ. ಕೆಲಸದ ನೇಮಕಾತಿಗೆ ಕನಿಷ್ಠ ವಯೋಮಾನ ಮೂಲಭೂತ ಶಿಕ್ಷಣದ ಗರಿಷ್ಠ ವಯೋಮಾನಕ್ಕಿಂದ ಕಡಿಮೆಯಾಗಿರಬಾರದು ಮತ್ತು ಅದು 15 ವರ್ಷಕ್ಕಿಂದ ಕಡಿಮೆ ಇರಬಾರದು ಎನ್ನುವ ಆಶಯವನ್ನು ಒಡಂಬಡಿಕೆಯು ಮುಂದಿಟ್ಟಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಹಿಂದುಳಿದ ರಾಷ್ಟ್ರಗಳಿಗೆ ಈ ವಿಚಾರದಲ್ಲಿ ರಿಯಾಯಿತಿ ನೀಡಲಾಗಿದೆ. ಅಂತಹ ರಾಷ್ಟ್ರಗಳು ಕನಿಷ್ಠ ವಯೋಮಾನವನ್ನು 14 ಎಂದು ನಿಗದಿಪಡಿಸಬಹುದು. ಆದರೆ, ಕ್ರಮೇಣ ಅದನ್ನು 15ಕ್ಕೆ ಏರಿಸಬೇಕು. ಅಪಾಯಕಾರಿ ಕ್ಷೇತ್ರಗಳ ಕೆಲಸಕ್ಕೆ ಕನಿಷ್ಠ ವಯೋಮಾನ 18 ವರ್ಷ ಎಂದೇ

ನಿಗದಿಪಡಿಸಬೇಕೆಂದು ಒಡಂಬಡಿಕೆ ಒತ್ತಾಯಿಸುತ್ತದೆ. ಇದಲ್ಲದೆ, ಉದ್ಯೋಗ ನೇಮಕಾತಿಗೆ ಕನಿಷ್ಠ ವಯೋಮಾನ ನಿಗದಿಪಡಿಸುವಾಗ ಅದು ಸ್ಥಿರವಾಗಿರಬಾರದು; ಯುವಕರ ಸಂಪೂರ್ಣ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆ ಮನಗಂಡು ಕನಿಷ್ಠ ವಯೋಮಾನವನ್ನು ಏರಿಸುತ್ತಾ ಹೋಗಬೇಕು ಎಂದು ಈ ಒಡಂಬಡಿಕೆ ಹೇಳುತ್ತದೆ.

## ಒಡಂಬಡಿಕೆ 182

1999ರಲ್ಲಿ ಜಾರಿಗೆ ಬಂದ ಈ ಒಡಂಬಡಿಕೆಯು ಹೀನಾಯ ಸ್ವರೂಪದ ಬಾಲಕಾರ್ಮಿಕ ಪದ್ಧತಿಯನ್ನು ತುರ್ತಾಗಿ ನಿಷೇಧಿಸುವಂತೆ ಮತ್ತು ನಿರ್ಮೂಲನೆ ಮಾಡುವಂತೆ ಆಗ್ರಹಿಸುತ್ತದೆ. ಈ ಒಡಂಬಡಿಕೆ ಪ್ರಕಾರ 18 ವರ್ಷ ಕನಿಷ್ಠ ವಯೋಮಾನ ಎಂದು ನಿಗದಿಪಡಿಸಲಾಗಿದೆ. ಹೀನಾಯ ಸ್ವರೂಪದ ಬಾಲಕಾರ್ಮಿಕ ಪದ್ಧತಿಯನ್ನು ಗುಲಾಮಗಿರಿಯ ವಿವಿಧ ರೂಪಗಳು ಎಂದು ಒಡಂಬಡಿಕೆ ವ್ಯಾಖ್ಯಾನಿಸುತ್ತದೆ. ಮಕ್ಕಳ ಮಾರಾಟ ಮತ್ತು ಸಾಗಾಣಿಕೆ, ಸಾಲದ ಮೇಲಿನ ಜೀತ, ಕಡ್ಡಾಯ ದುಡಿಮೆ, ಸೈನಿಕ ಸಂಘರ್ಷದಲ್ಲಿ ಮಕ್ಕಳ ಕಡ್ಡಾಯ ನೇಮಕಾತಿ, ಲೈಂಗಿಕ ದಂಧೆಗಾಗಿ ಮತ್ತು ಲೈಂಗಿಕ ಚಿತ್ರಗಳ ನಿರ್ಮಾಣಕ್ಕಾಗಿ ಮಕ್ಕಳ ಬಳಕೆ, ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಮಕ್ಕಳ ಬಳಕೆ ಮುಂತಾದವುಗಳನ್ನು ಒಡಂಬಡಿಕೆ ಹೀನಾಯವೆಂದು ಗುರುತಿಸುತ್ತದೆ. ಮಕ್ಕಳ ದೈಹಿಕ, ಮಾನಸಿಕ ಮತ್ತು ಲೈಂಗಿಕ ದುರ್ಬಳಕೆ, ಭೂಮಿಯಡಿಯಲ್ಲಿ, ನೀರಿನಲ್ಲಿ, ಅಪಾಯಕಾರಿಯಾದ ಎತ್ತರದಲ್ಲಿ, ಮುಚ್ಚಿದ ಜಾಗಗಳಲ್ಲಿ ಕೆಲಸ ಮಾಡುವುದು, ಅಪಾಯಕಾರಿ ಯಂತ್ರಗಳೊಂದಿಗೆ, ಅನಾರೋಗ್ಯಕರವಾದ ವಾತಾವರಣದಲ್ಲಿ, ರಾತ್ರಿ ವೇಳೆಯಲ್ಲಿ ಕೆಲಸ ಮಾಡುವುದು, ದೀರ್ಘ ಕಾಲದ ಕೆಲಸ ಮುಂತಾದವುಗಳನ್ನು 'ಅಪಾಯಕಾರಿ ಕೆಲಸ' ಎಂದು 182ನೇ ಒಡಂಬಡಿಕೆ ಅರ್ಥೈಸುತ್ತದೆ.

ಈ ಎರಡೂ ಒಡಂಬಡಿಕೆಗಳಿಗೆ ಭಾರತ ಇನ್ನೂ ಸಹಿ ಹಾಕಲಿಲ್ಲ. ಭಾರತವು ಈ ಒಡಂಬಡಿಕೆಗಳನ್ನು ಸಹಿ ಹಾಕಿ ಅಂಗೀಕಾರ ಮಾಡಿಕೊಂಡಲ್ಲಿ ಉದ್ಯೋಗ ನೇಮಕಾತಿಯಲ್ಲಿ ಕನಿಷ್ಠ ವಯೋಮಾನದ ನಿಗದಿಪಡಿಸುವಿಕೆ ಮತ್ತು ಹೀನಾಯ ಸ್ವರೂಪದ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸಂಬಂಧಿಸಿದಂತೆ ಪ್ರಸ್ತುತವಿರುವ ಕಾನೂನಿನಲ್ಲಿ ಸೂಕ್ತ ಮಾರ್ಪಾಡುಗಳು ಅಥವಾ ಸೂಕ್ತ ಕಾನೂನುಗಳನ್ನು ರಚಿಸಿ ಅನುಷ್ಠಾನ ಮಾಡುವಲ್ಲಿ ಭಾರತ ಸರ್ಕಾರದ ಮೇಲೆ ಒತ್ತಡ ಹೇರಲು ಸಾಧ್ಯವಾಗುವುದು. ಅಷ್ಟೇ ಅಲ್ಲದೆ, ಕಾನೂನಿನಲ್ಲಿನ ಬದಲಾವಣೆ ಮತ್ತು ಅನುಷ್ಠಾನದ ಉಸ್ತುವಾರಿ ಮತ್ತು ಮೇಲ್ವಿಚಾರಣೆಯನ್ನು ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳೂ ನೋಡಿಕೊಳ್ಳಲು ಅವಕಾಶ ಕಲ್ಪಿಸಿದಂತಾಗುವುದು.

ಒಡಂಬಡಿಕೆಯ ಮೂಲಕ ಒಪ್ಪಿದ ಅಂಶಗಳನ್ನು ಜಾರಿ ಮಾಡಲು ಸದಸ್ಯರಾಷ್ಟ್ರಗಳು ಬದ್ಧವಾಗಿವೆ ಮತ್ತು ಅದಕ್ಕೆ ದೂರಗಾಮಿ ಪರಿಣಾಮಗಳಿವೆ. ಇದು ಹೊಸ ಕಾನೂನು ಮತ್ತು ನೀತಿ ನಿಯಮಗಳ ರಚನೆಗೆ ಅವಕಾಶ ಮಾಡಿಕೊಡುವುದಲ್ಲದೆ, ಯೋಜನೆಗಳನ್ನು ರೂಪಿಸುವಲ್ಲಿ ಅನೇಕ ಸಕಾರಾತ್ಮಕ ಬದಲಾವಣೆಗಳಿಗೆ ಕಾರಣವಾಗುವುದು. ಇದಷ್ಟೇ ಅಲ್ಲದೆ, ಅನೇಕ ವ್ಯಕ್ತಿ ಮತ್ತು ಸಾಮಾಜಿಕ ಸಂಘಟನೆಗಳಿಗೆ ತಮ್ಮ ವಿಚಾರಗಳ ಪ್ರತಿಪಾದನೆ (ಅಡ್ವೋಕಸಿ) ಮಾಡಲೂ ನೆರವಾಗುವುದು.

ಐಎಲ್‌ಓ ಒಡಂಬಡಿಕೆ ಸಂಖ್ಯೆ 138 ಮತ್ತು 182ರಲ್ಲಿ ಸದಸ್ಯರಾಷ್ಟ್ರಗಳು ಒಡಂಬಡಿಕೆಯಲ್ಲಿನ ಆಶಯಗಳನ್ನು ಅನುಷ್ಠಾನಗೊಳಿಸಲು ಪೂರಕ ನಿಯಮಗಳು ಮತ್ತು ವ್ಯವಸ್ಥೆಗಳನ್ನು ರೂಪಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದೆ. ಇದಕ್ಕಾಗಿ ಅಂತಾರಾಷ್ಟ್ರೀಯ ಸಹಕಾರ ಮತ್ತು ನೆರವು ಸೇರಿದಂತೆ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರಿಯಾಯೋಜನೆಗಳನ್ನು ಮುಖ್ಯ ಆದ್ಯತೆಯಾಗಿಟ್ಟುಕೊಂಡಿದೆ.

ಹೀನಾಯ ಸ್ವರೂಪದ ಬಾಲಕಾರ್ಮಿಕ ಪದ್ಧತಿಯನ್ನು ಪರಿಣಾಮಕಾರಿಯಾಗಿ ನಿರ್ಮೂಲನೆ ಮಾಡಲು ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣ ಬಹಳ ಮುಖ್ಯ. ಎಲ್ಲಾ ರೀತಿಯ ದುಡಿಮೆಯಿಂದ ಮಕ್ಕಳನ್ನು ಬಿಡುಗಡೆಗೊಳಿಸಿ ಅವರಿಗೆ ಪುನರ್ವಸತಿಯನ್ನೂ, ಸಾಮಾಜಿಕ ಸಂಬಂಧಗಳನ್ನೂ ಕಲ್ಪಿಸುವಂತಹ ಶೀಘ್ರ ಮತ್ತು ಸಮಗ್ರವಾದ ಕ್ರಿಯಾಯೋಜನೆಯ ಅಗತ್ಯವಿದೆ ಎಂಬುದನ್ನು ಈ ಒಡಂಬಡಿಕೆಗಳು ಪರಿಗಣಿಸಿವೆ.

ವಯೋಮಾನದ ಮಿತಿಯನ್ನು ವ್ಯವಸ್ಥಿತವಾಗಿ 14ರ ಬದಲಿಗೆ 18 ವರ್ಷಕ್ಕೆ ಏರಿಸಿ, 18 ವರ್ಷದೊಳಗಿನ ಎಲ್ಲರನ್ನೂ ಬಾಲಕಾರ್ಮಿಕರೆಂದು ಪರಿಗಣಿಸುವಂತೆ ಸದಸ್ಯರಾಷ್ಟ್ರಗಳಿಗೆ ಒಡಂಬಡಿಕೆಯು ಒತ್ತಾಯಿಸುತ್ತದೆ.

ಬಾಲಕಾರ್ಮಿಕರ ಮತ್ತು ಅಪಾಯಕ್ಕೆ ತುತ್ತಾಗುವ ಸಾಧ್ಯತೆಯಿರುವ ಮಕ್ಕಳ ಬದುಕಿನಲ್ಲಿ ಬೆಳಕನ್ನು ತರಲು ಎಲ್ಲ ಭಾಗೀದಾರರನ್ನೂ ಒಟ್ಟುಗೂಡಿಸುವ ಮತ್ತು ಆ ನಿಟ್ಟಿನಲ್ಲಿ ಕೆಲಸ ಮಾಡುವ ಅವಕಾಶವನ್ನು ಐಎಲ್‌ಓ ಒಡಂಬಡಿಕೆಗಳು ಕಲ್ಪಿಸಿಕೊಡುತ್ತವೆ.

## ಐಪೆಕ್ (IPEC) ಕಾರ್ಯಕ್ರಮಗಳು

1992ರಲ್ಲಿ ಐಎಲ್‌ಓ ಪ್ರಾರಂಭಿಸಿದ 'ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಜಾಗತಿಕ ಕಾರ್ಯಕ್ರಮ' (ಐಪೆಕ್) ಭಾರತ ದೇಶ ಸೇರಿದಂತೆ 70 ದೇಶಗಳಲ್ಲಿ

ಜಾರಿಯಲ್ಲಿದೆ. ಸರ್ಕಾರಗಳು, ಟ್ರೇಡ್ ಯೂನಿಯನುಗಳು ಮತ್ತು ಸ್ವಯಂಸೇವಾ ಸಂಸ್ಥೆಗಳ ಮೂಲಕ ಈ ಕಾರ್ಯಕ್ರಮವು ಸಂಶೋಧನೆ, ಕ್ರಿಯಾ ಯೋಜನೆ, ಪುಸ್ತಕ ಪ್ರಕಾಶನ, ಸಂವಹನ ಸಾಮಗ್ರಿಗಳ ತಯಾರಿಕೆ ಮತ್ತು ಜನಜಾಗೃತಿಗೆ ಒತ್ತು ನೀಡಿದೆ. ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಹೊಸ ನೀತಿ, ನಿಯಮ ಮತ್ತು ಯೋಜನೆ ರೂಪಿಸುವ ನಿಟ್ಟಿನಲ್ಲಿ ಸರ್ಕಾರದ ಮೇಲೆ ಒತ್ತಡ ಹೇರುವುದನ್ನು ಕೂಡಾ ಐಪೆಕ್ ಒಳಗೊಂಡಿದೆ.

ಜೀತ ಬಾಲಕಾರ್ಮಿಕರು, ಅಪಾಯಕಾರಿ ಕ್ಷೇತ್ರಗಳಲ್ಲಿ ಮತ್ತು ಸ್ಥಿತಿಯಲ್ಲಿ ಕೆಲಸ ಮಾಡುವ ಮಕ್ಕಳು ಮತ್ತು ಅಪಾಯಕ್ಕೆ ತುತ್ತಾದ ಮಕ್ಕಳು ಐಪೆಕ್‌ನ ಮೊದಲನೆಯ ಆದ್ಯತೆ. ಕರ್ನಾಟಕ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ಯೋಜನೆ (ಕೆಸಿಎಲ್‌ಪಿ) ಐಪೆಕ್‌ನ ಯೋಜನೆಗಳಲ್ಲಿ ಒಂದಾಗಿದೆ.

**ಬಾಲ್ಯ ವಿವಾಹ ನಿರ್ಮೂಲನಾ ಕಾಯ್ದೆ :** 2006ರಲ್ಲಿ ಜಾರಿಗೆ ಬಂದ ಈ ಕಾಯ್ದೆಯು 18 ವರ್ಷ ತುಂಬದ ಹೆಣ್ಣುಮಕ್ಕಳ ವಿವಾಹವನ್ನು ಸಂಪೂರ್ಣವಾಗಿ ನಿಷೇಧಿಸಿದೆ.

**ಕರ್ನಾಟಕ ನಾಗರೀಕ ಸೇವಾ (ನಡವಳಿಕೆ) ಕಾಯ್ದೆ 1996ರ ನಿಯಮ 29ಎ :** ಸರ್ಕಾರಿ ನೌಕರರು 14 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧ.

**1976ರ ಜೀತ ಪದ್ಧತಿ ನಿರ್ಮೂಲನೆ ಕಾಯ್ದೆ :** ಯಾವುದೇ ಮಕ್ಕಳನ್ನು, ನಾಗರೀಕರನ್ನು ಜೀತಕ್ಕೆ / ಸಂಬಳಕ್ಕೆ ಇಡುವಂತಿಲ್ಲ.

**1961ರ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ :** ಅಂಗಡಿ ಮತ್ತು ವಾಣಿಜ್ಯ ಮಳಿಗೆಗಳಲ್ಲಿ 14 ವರ್ಷದೊಳಗಿನ ಮಕ್ಕಳನ್ನು ದುಡಿಸುವುದು ಕಲಂ 24ರನ್ವಯ ಸಂಪೂರ್ಣವಾಗಿ ನಿಷೇಧಿಸಲಾಗಿದೆ.

**ಜೀತ ಪದ್ಧತಿ ನಿಷೇಧ ಕಾಯ್ದೆ, 1976 :** ಮಕ್ಕಳ ಜೀತದ ದುಡಿಮೆ ಸೇರಿದಂತೆ ಎಲ್ಲ ಜೀತ ಪದ್ಧತಿಯನ್ನು ಈ ಕಾಯ್ದೆ ಮೂಲಕ ನಿಷೇಧಿಸಲಾಗಿದೆ. ಜೀತದಿಂದ ವಿಮುಕ್ತಗೊಂಡ ಕಾರ್ಮಿಕರಿಗೆ ಕಲಂ 4ರನ್ವಯ ರಾಜ್ಯ ಸರ್ಕಾರದಿಂದ ವಿಶೇಷ ಅನುದಾನ ಮತ್ತು ಪುನರ್ವಸತಿ ನೀಡಲಾಗುತ್ತದೆ.

**ಬೀಡಿ ಮತ್ತು ಸಿಗಾರ್ ಕಾರ್ಮಿಕರ ಕಾಯ್ದೆ, 1966 :** ಯಾವುದೇ ಕೈಗಾರಿಕಾ ಆವರಣದಲ್ಲಿ 14 ವರ್ಷದೊಳಗಿನ ಮಕ್ಕಳನ್ನು ದುಡಿಸುವುದು ಕಲಂ 24ರನ್ವಯ ಸಂಪೂರ್ಣವಾಗಿ ನಿಷೇಧಿಸಲಾಗಿದೆ.

**ಕಾರ್ಖಾನೆ ಕಾಯ್ದೆ, 1948 :** ಕಲಂ 67ರ ಪ್ರಕಾರ 14 ವರ್ಷದೊಳಗಿನ ಮಕ್ಕಳನ್ನು ಯಾವುದೇ ಕಾರ್ಖಾನೆಯಲ್ಲಿ ದುಡಿಸಬಾರದು.

## ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳು :

ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳು ಮಹತ್ವಪೂರ್ಣವಾದದ್ದು ಏಕೆಂದರೆ, ಅವುಗಳಿಗೆ ಕಾನೂನಿನಷ್ಟೇ ಸಮಾನವಾದ ಬಲ ಇರುತ್ತದೆ. ಈ ತೀರ್ಪುಗಳನ್ನು ನಾಡಿನ ಕಾನೂನು (Law of the land) ಎಂದೇ ಪರಿಗಣಿಸಲಾಗುತ್ತದೆ. 1996 ಡಿಸೆಂಬರ್ 10ರಂದು 'ಎಂ. ಸಿ. ಮೆಹ್ತಾ ವರ್ಸಸ್ ತಮಿಳುನಾಡು ಸರ್ಕಾರ' ಪ್ರಕರಣದಲ್ಲಿ ಸರ್ವೋಚ್ಛ ನ್ಯಾಯಾಲಯವು ಮಹತ್ವದ ತೀರ್ಪು ನೀಡಿದೆ. ಅಪಾಯಕಾರಿ ಉದ್ದಿಮೆಗಳಿಂದ ಮಕ್ಕಳನ್ನು ಬಿಡುಗಡೆ ಮಾಡಿ ಅವರಿಗೆ ಶಿಕ್ಷಣ ನೀಡುವುದು, ಬಾಲಕಾರ್ಮಿಕರ ಮಾಲೀಕರಿಗೆ ರೂ. 20,000 ದಂಡ ವಿಧಿಸುವುದು ಮತ್ತು ರಾಜ್ಯ ಸರ್ಕಾರವು ರೂ. 5,000 ಅಥವಾ ಬಾಲಕಾರ್ಮಿಕರ ಕುಟುಂಬದ ವಯಸ್ಕ ಸದಸ್ಯರೊಬ್ಬರಿಗೆ ಉದ್ಯೋಗ ನೀಡುವುದು, ವಸೂಲಾದ ಹಣವನ್ನು ಮಕ್ಕಳ ಕಲ್ಯಾಣ ನಿಧಿಗೆ ಪಾವತಿಸಿ, ಅದರ ಬಡ್ಡಿಯನ್ನು ಬಾಲಕಾರ್ಮಿಕರ ಶಿಕ್ಷಣಕ್ಕಾಗಿ ನೀಡುವುದು ಈ ತೀರ್ಪಿನ ಮುಖ್ಯಾಂಶಗಳು. ಖ್ಯಾತ ವಕೀಲರಾದ ಎಂ. ಸಿ. ಮೆಹ್ತಾರವರು ನ್ಯಾಯಾಲಯದಲ್ಲಿ ಈ ದಾವೆಯನ್ನು ಹೂಡಿದರು.

'ಬಾಂಧ್ವಾ ಮುಕ್ತಿ ಮೋರ್ಚಾ ಮತ್ತು ಇತರರು ವರ್ಸಸ್ ಭಾರತ ಸರ್ಕಾರ ಮತ್ತು ಇತರರು' ಪ್ರಕರಣದಲ್ಲಿ ಸರ್ವೋಚ್ಛ ನ್ಯಾಯಾಲಯವು 1999 ಮೇ 7ರಂದು ನೀಡಿದ ತೀರ್ಪಿನಲ್ಲಿ ಬಾಲಕಾರ್ಮಿಕರ ಗುರುತಿಸುವಿಕೆ, ಬಿಡುಗಡೆ ಮತ್ತು ಪುನರ್ವಸತಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡಿದೆ. 14 ವರ್ಷದೊಳಗಿನ ಮಕ್ಕಳ ದುಡಿಮೆಯನ್ನು ಸಂಪೂರ್ಣ ನಿಷೇಧ ಮಾಡುವಂತೆ ಮತ್ತು ಮಕ್ಕಳಿಗೆ ಶಿಕ್ಷಣ, ಆರೋಗ್ಯ, ಸ್ವಚ್ಛತೆ ಮತ್ತು ಪೌಷ್ಠಿಕಾಹಾರ ನೀಡುವಂತೆ ಕ್ರಮ ತೆಗೆದುಕೊಳ್ಳಲು ನ್ಯಾಯಾಲಯವು ಉತ್ತರ ಪ್ರದೇಶ ಸರ್ಕಾರಕ್ಕೆ ಸೂಚಿಸಿದೆ.

ಬಾಲಕಾರ್ಮಿಕ ಪದ್ಧತಿಯನ್ನು ನಾನು ವಿರೋಧಿಸುತ್ತೇನೆ. ಇದೊಂದು ಅಮಾಯಕ ಪದ್ಧತಿ.

**ಡಾ. ಚಂದ್ರಶೇಖರ ಕಂಬಾರ,** ಸಾಹಿತಿ.

# ಮಂಡಕ್ಕಿ ಬಟ್ಟಿಯಲ್ಲಿ ಬಲಿಯಾದ ಬಾಲಕ

13 ವರ್ಷದ ತಾಹಿರ್ ಅಲಿ ದಾವಣಗೆರೆಯ ಬಾಷಾನಗರದಲ್ಲಿರುವ ಷರೀಫುಲ್ಲಾರ ಮಂಡಕ್ಕಿ ಭಟ್ಟಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಕೆಲಸದ ವೇಳೆ ಆತ ದುರಾದೃಷ್ಟವಶಾತ್ ಬತ್ತ ಬೇಯಿಸುವ ಡ್ರಮ್‌ನೊಳಕ್ಕೆ ಬಿದ್ದುಬಿಟ್ಟ. ಕುದಿಯುವ ನೀರಿನಲ್ಲಿ ಬಿದ್ದ ಪರಿಣಾಮ ತಾಹಿರ್‌ನ ಮೈ ಪೂರ್ತಿ ಬೆಂದು ಹೋಯಿತು. ಆತನನ್ನು ಕೂಡಲೇ ಚಿಗಟೇರಿ ಆಸ್ಪತ್ರೆಗೆ ಸೇರಿಸಲಾಯಿತು. ಸಾಯುವ ಮೊದಲು ತಾಹಿರ್ ತನ್ನ ಹೇಳಿಕೆಯಲ್ಲಿ ಹೀಗೆ ಹೇಳಿದ: "ನಾನು ಷರೀಫುಲ್ಲಾ ಅವರಿಗೆ ಸೇರಿದ ಮಂಡಕ್ಕಿ ಭಟ್ಟಿಯಲ್ಲಿ ಕೆಲಸ ಮಾಡುವಾಗ ಗಾಯಗೊಂಡೆ". ನಾಲ್ಕು ದಿನಗಳ ನಂತರ, 2004 ಡಿಸೆಂಬರ್ 7ರಂದು ತಾಹಿರ್ ತೀರಿಕೊಂಡುಬಿಟ್ಟ. ಮಾಧ್ಯಮಗಳಲ್ಲಿ ತಾಹಿರ್ ಪ್ರಕರಣ ದೊಡ್ಡ ಸುದ್ದಿಯಾಯಿತು. ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ, ಸಂಘ–ಸಂಸ್ಥೆಗಳು, ನಾಗರೀಕ ಸಂಘಟನೆಗಳು ದಾವಣಗೆರೆಯ ಬೀದಿಗಳಲ್ಲಿ ಮೆರವಣಿಗೆ ಮಾಡಿ, ಮಂಡಕ್ಕಿ ಭಟ್ಟಿಗಳಲ್ಲಿನ ಮಕ್ಕಳನ್ನು ಕೂಡಲೇ ರಕ್ಷಿಸುವಂತೆ ಸರ್ಕಾರವನ್ನು ಒತ್ತಾಯಿಸಿತು. ಇದಾದನಂತರ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ವರದಿಗಾಗಿ ಕರ್ನಾಟಕ ಸರ್ಕಾರಕ್ಕೆ ನೋಟೀಸ್ ಜಾರಿ ಮಾಡಿತು. ರಾಜ್ಯ ಕಾರ್ಮಿಕ ಇಲಾಖೆ ಕಾರ್ಯದರ್ಶಿ ಜಿಲ್ಲಾ ಕಾರ್ಮಿಕ ಅಧಿಕಾರಿಗೆ ಷೋಕಾಸ್ ನೋಟಿಸ್ ಕಳುಹಿಸಿದರು. ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡ ಪೊಲೀಸ್ ಇಲಾಖೆಯು ಭಟ್ಟಿಗಳಿಂದ ಬಾಲಕಾರ್ಮಿಕರನ್ನು ಒಂದು ತಿಂಗಳೊಳಗೆ ಮುಕ್ತಗೊಳಿಸುವಂತೆ ಮಾಲೀಕರಿಗೆ ತಾಕೀತು ಮಾಡಿತು. ಇದಕ್ಕಾಗಿ ಮಂಡಕ್ಕಿ ಭಟ್ಟಿ ಕ್ಷೇತ್ರದಲ್ಲಿ ಬೃಹತ್ ಸಮಾವೇಶ ನಡೆಸಿದರು. ಅನೇಕ ಮಾಲೀಕರು ಮತ್ತು ಕಾರ್ಮಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ನಂತರ ಸಂಘಸಂಸ್ಥೆಗಳು, ಕಾರ್ಮಿಕ ಇಲಾಖೆ ಅಧಿಕಾರಿಗಳ ನೆರವಿನೊಂದಿಗೆ ನಡೆಸಿದ ದಾಳಿಯಲ್ಲಿ 7 ಮಕ್ಕಳನ್ನು ಬಿಡುಗಡೆಗೊಳಿಸಲಾಯಿತು. ಮಕ್ಕಳು ಕೆಲಸ ಮಾಡುತ್ತಿದ್ದ ಭಟ್ಟಿಗಳನ್ನು ವಶಕ್ಕೆ ತೆಗೆದುಕೊಂಡು ಅವುಗಳಿಗೆ ಬೀಗಮುದ್ರೆ ಹಾಕಲಾಯಿತು.



**ಕರ್ನಾಟಕ ಹೈಕೋರ್ಟ್‌ನ 1997 ಜೂನ್ 6 ರ ತೀರ್ಪು :** ಯಾವುದೇ ಮಕ್ಕಳನ್ನು ಯಾವುದೇ ಕಾರಣಕ್ಕೂ ಯಾವುದೇ ಕ್ಷೇತ್ರದಲ್ಲಿ ದುಡಿಸುವುದು ಶಿಕ್ಷಾರ್ಹ ಅಪರಾಧ.

**ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗ (ಎನ್‌ಸಿಪಿಸಿಆರ್–NCPCR) :** ಇದು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ 2007ರಲ್ಲಿ ರಚನೆಯಾದ ಆಯೋಗ. ಆಂಧ್ರ ಪ್ರದೇಶದಲ್ಲಿ ಹೆಸರುವಾಸಿಯಾದ ಎಂ. ವೆಂಕಟರಂಗಯ್ಯ ಫೌಂಡೇಶನ್‌ನ ಕಾರ್ಯದರ್ಶಿ ಹಾಗೂ ಓಸ್ಮಾನಿಯಾ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರೂ ಆದ ಡಾ. ಶಾಂತಾ ಸಿನ್ಹಾ ಆಯೋಗದ ಮೊದಲ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ತಮ್ಮ ಸಂಸ್ಥೆಯ ಮೂಲಕ ಲಕ್ಷಗಟ್ಟಲೆ ಮಕ್ಕಳು ಶಾಲಾಶಿಕ್ಷಣದತ್ತ ಮರಳಲು ಅವರು ನೆರವಾದರು. ಅವರ ಪ್ರಯತ್ನವನ್ನು ಗೌರವಿಸಿ ಅವರಿಗೆ ಮ್ಯಾಗ್ಸೇಸೆ ಪ್ರಶಸ್ತಿ ಕೂಡಾ ಸಂದಿದೆ.

ಈ ಆಯೋಗದಲ್ಲಿ 8 ಸದಸ್ಯರಿರುತ್ತಾರೆ. ಮಕ್ಕಳಿಗೆ ಸಂಬಂದಪಟ್ಟಂತಹ ವಿವಿಧ ಕ್ಷೇತ್ರಗಳ ತಜ್ಞರು ಇದರ ಸದಸ್ಯರಾಗಿ ಆಯ್ಕೆಯಾಗುತ್ತಾರೆ. ಎಲ್ಲಾ ರಾಜ್ಯಗಳಲ್ಲಿಯೂ ಈ ಮಾದರಿಯ ಆಯೋಗಗಳು ರಾಜ್ಯ ಸರ್ಕಾರ ರಚನೆ ಮಾಡಬೇಕಾಗಿದೆ. ಕರ್ನಾಟಕದಲ್ಲಿ ಸದ್ಯದಲ್ಲಿಯೇ ರಾಜ್ಯ ಆಯೋಗ ಅಸ್ತಿತ್ವಕ್ಕೆ ಬರಲಿದೆ.

ಆಯೋಗವು ದೇಶದಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳನ್ನು ಕೈಗೆತ್ತಿಕೊಂಡು ವಿಚಾರಣೆ ಮಾಡುತ್ತದೆ. ಮಕ್ಕಳ ಮೇಲೆ ನಡೆಯುವ ಹಿಂಸೆ, ಕಿರುಕುಳ, ಹಕ್ಕು ಉಲ್ಲಂಘನೆ ಇವುಗಳ ದೂರುಗಳನ್ನು ಆಲಿಸಲು ಮತ್ತು ಸೂಕ್ತ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸರಕಾರಕ್ಕೆ / ಇಲಾಖೆಗೆ ಸೂಚಿಸಲು ಆಯೋಗಕ್ಕೆ ಅಧಿಕಾರವಿದೆ. ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ನಾಗರೀಕ

ಸಂಘ–ಸಂಸ್ಥೆಗಳು ಆಯೋಗಕ್ಕೆ ದೂರು ಸಲ್ಲಿಸಬಹುದಾಗಿದೆ. ಮಕ್ಕಳ ಸಂವಿಧಾನಬದ್ಧ ಹಕ್ಕುಗಳು ಎಲ್ಲರಿಗೂ ತಲುಪುವಂತೆ ನೋಡಿಕೊಳ್ಳಲು ಮತ್ತು ಮಕ್ಕಳ ಯೋಜನೆಗಳು / ಕಾರ್ಯಕ್ರಮಗಳ ಪರಿಣಾಮಕಾರಿ ಜಾರಿಯ ಮೇಲ್ವಿಚಾರಣೆ ಮಾಡಲು ಆಯೋಗಕ್ಕೆ ಅಧಿಕಾರವಿದೆ. ಮಕ್ಕಳ ಅಭ್ಯುದಯಕ್ಕಾಗಿ ಆಗಾಗ್ಗೆ ಕಾನೂನು ರಚನೆ ಮತ್ತು ತಿದ್ದುಪಡಿಗೆ ಆಯೋಗವು ಸರ್ಕಾರಕ್ಕೆ ಶಿಫಾರಸ್ಸು ಸಲ್ಲಿಸಬಹುದಾಗಿದೆ.

## ಸಹಸ್ರಮಾನ ಅಭಿವೃದ್ಧಿ ಗುರಿಗಳು

(Millennium Development Goals)

1. ಅತಿಕಠಿಣವಾದ ಬಡತನ ಮತ್ತು ಹಸಿವು ನೀಗಿಸುವುದು
2. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ನೀಡುವುದು
3. ಲಿಂಗಸಮಾನತೆ ಮತ್ತು ಮಹಿಳಾ ಸಬಲೀಕರಣ
4. ಮಕ್ಕಳ ಸಾವಿನ ಪ್ರಮಾಣ ಕಡಿಮೆ ಮಾಡುವುದು
5. ಮಾತೃ ಆರೋಗ್ಯ ಉತ್ತಮಗೊಳಿಸುವುದು
6. ಹೆಚ್ಐವಿ / ಏಡ್ಸ್, ಮಲೇರಿಯಾ ಮತ್ತು ಇತರೆ ಕಾಯಿಲೆಗಳನ್ನು ತಡೆಯುವುದು
7. ಪರಿಸರ ಸಮತೋಲನ ಕಾಪಾಡುವುದು
8. ಅಭಿವೃದ್ಧಿಗಾಗಿ ಜಾಗತಿಕ ಮಟ್ಟದ ಸಹಭಾಗಿತ್ವ

2000ದಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ಸಹಸ್ರಮಾನ ಶೃಂಗಸಭೆಯಲ್ಲಿ ಭಾಗವಹಿಸಿದ ಭಾರತವು ಸೇರಿದಂತೆ 189 ರಾಷ್ಟ್ರಗಳು ಒಪ್ಪಿಕೊಂಡ ಗುರಿಗಳು ಇವು. 2015ರೊಳಗೆ ಈ ಗುರಿಯನ್ನು ತಲುಪಲು ಪ್ರತಿಯೊಂದು ರಾಷ್ಟ್ರವು ಬದ್ಧವಾಗಿದೆ. ಕರ್ನಾಟಕ ಸರ್ಕಾರವು ಈ ಗುರಿಗಳಿಗೆ ಬದ್ಧವಾಗಿ ನೀತಿ ನಿಯಮಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸಿದಲ್ಲಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಯ ಹಾದಿ ಸುಗಮವಾಗುತ್ತದೆ.

ನನ್ನ ಮೂರು ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಕಲಿಯಬೇಕಾದ ವಯಸ್ಸಿನಲ್ಲಿ ಮಕ್ಕಳು ದುಡಿಯುವುದನ್ನು ನಾನು ಒಪ್ಪುವುದಿಲ್ಲ.

**ಲೋಕೇಶ,** ಆಟೋ ಚಾಲಕ,
ಹಾಸನ ನಗರ.

# ರಶ್ಮಿ ಮರಳಿ ಮನೆಗೆ

11 ವರ್ಷದ ರಶ್ಮಿಯ ತಾಯಿ ಗೌರಮ್ಮನಿಗೆ ಅಗರಬತ್ತಿ ಕಡ್ಡಿ ಉಜ್ಜುವುದೊಂದು ಬಿಟ್ಟರೆ ಬೇರೆ ಯಾವ ಕೆಲಸವೂ ಗೊತ್ತಿಲ್ಲ. ರಶ್ಮಿಯ ತಂದೆ ನಾಲ್ಕು ವರ್ಷದ ಹಿಂದೆ ವಿಷ ಸೇವನೆ ಮಾಡಿ ತೀರಿಕೊಂಡಿದ್ದರು. ಐದು ಹೆಣ್ಣುಮಕ್ಕಳನ್ನು ಸಾಕುವುದು ಗೌರಮ್ಮನಿಗೆ ಬಹು ದೊಡ್ಡ ಸವಾಲಾಗಿತ್ತು. ಗಂಡ ಬಿಟ್ಟು ಹೋದ ರೂ. 9000ದ ಸಾಲದ ಹೊರೆ ಬೇರೆ. 2000 ಅಗರಬತ್ತಿಗೆ ಕೈ ಸೇರುವುದು ರೂ. 26 ಮಾತ್ರ. ಗುಡಿಸಲು ಬಾಡಿಗೆ ತಿಂಗಳಿಗೆ ರೂ. 400. ಕೊನೆಯ ಇಬ್ಬರು ಮಕ್ಕಳನ್ನು ತಮಿಳುನಾಡಿನ ದಂಪತಿಗಳಿಗೆ ದತ್ತು ಕೊಟ್ಟೇಬಿಟ್ಟರು. ಮಕ್ಕಳು ಹೇಗಾದರೂ ಬದುಕಲಿ ಎನ್ನುವ ಉದ್ದೇಶ ಆಕೆಯದಾಗಿತ್ತು. ದೊಡ್ಡವಳಿಗೆ ಈಗ 16 ವರ್ಷ. ಚಿಕ್ಕವರಾದ ಲಕ್ಷ್ಮಿ ಮತ್ತು ರಶ್ಮಿಯನ್ನು ಬೆಂಗಳೂರಿನ ಒಂದು ಮನೆಯಲ್ಲಿ ಕೆಲಸಕ್ಕೆಂದು ಬಿಟ್ಟರು. ಇಬ್ಬರೂ ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದರು. ರಶ್ಮಿ ಬೆಂಗಳೂರಿನ ಮನೆಗೆ ಹೊಂದಿಕೊಂಡು ಹೋಗುತ್ತಿದ್ದಳು. ಬೆಳಿಗ್ಗೆ 5 ರಿಂದ ರಾತ್ರಿ 12 ಗಂಟೆ ವರೆಗೂ ಕೆಲಸ ಮಾಡುತ್ತಿದ್ದಳು. ಅವಳಿಗೆ ಮಲಗಲು ಒಂದು ಚಾಪೆ ಕೊಟ್ಟಿದ್ದರು. ದಿಂಬು ಇರಲೇ ಇಲ್ಲ. ಒಂದೇ ಕಟ್ಟಡದಲ್ಲಿ ತಾಯಿ ಮನೆ ಮತ್ತು ಮಗಳ ಮನೆ ಇತ್ತು. ಎರಡು ಮನೆಗಳಲ್ಲಿಯೂ ರಶ್ಮಿ ಕೆಲಸ ಮಾಡುತ್ತಿದ್ದಳು. ಬೈಗುಳ, ಬಡಿತ ಸಾಮಾನ್ಯವಾಗಿತ್ತು. ಒಂದು ವರ್ಷದವರೆಗೆ ಬಾಲಕಿ ಅಲ್ಲಿ ಕೆಲಸ ಮಾಡಿದಳು. ಒಂದು ದಿನ, ಯವುದೋ ಬಟ್ಟೆ ಒಗೆದಿಲ್ಲ ಎನ್ನುವ ಕಾರಣ ಹೇಳಿ ಅವಳನ್ನು ಮಾಲೀಕಳು ಕಟ್ಟಿಹಾಕಿ ದೊಣ್ಣೆಯಲ್ಲಿ ಕಾಲಿಗೆ ಹೊಡೆದಳು. ಮಂಡಿಯ ಕೆಳಗೆ ಗಾಯವಾಗಿ ರಕ್ತ ಸುರಿಯಿತು. ಅಂದೇ ಅಲ್ಲಿಂದ ತಪ್ಪಿಸಿಕೊಂಡ ಅವಳು ಬೆಂಗಳೂರು ಬಸ್ ನಿಲ್ದಾಣ ತಲುಪಿದಳು. ಅಲ್ಲಿ ಅಳುತ್ತಾ ನಿಂತಿದ್ದ ಆಕೆಯನ್ನು ಪೊಲೀಸರು ಬೆಂಗಳೂರಿನ ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಿದರು. ಬಾಲಕಿ ಮೈಸೂರಿನವಳಾಗಿರುವುದರಿಂದ ಮೈಸೂರು ಮಕ್ಕಳ ಕಲ್ಯಾಣ ಸಮಿತಿಗೆ ರಶ್ಮಿಯನ್ನು ಕಳುಹಿಸಿಕೊಡಲಾಯಿತು. ಸಮಿತಿಯು ರಶ್ಮಿಯೊಂದಿಗೆ ಆಪ್ತಸಮಾಲೋಚನೆ ಮಾಡಿ, ಅವಳಲ್ಲಿ ಶಿಕ್ಷಣದ ಮಹತ್ವದ ಕುರಿತು ಭರವಸೆ ಮೂಡಿಸಿತು. ಅವಳ ತಾಯಿಯನ್ನು ಒಂದು ವಾರದಲ್ಲಿ ಪತ್ತೆ ಹಚ್ಚಲಾಯಿತು. ಕೌಟುಂಬಿಕ ಸ್ಥಿತಿಯ ಕುರಿತ ತನಿಖಾ ವರದಿಯ ಆಧಾರದ ಮೇಲೆ ರಶ್ಮಿಯನ್ನು ತಾಯಿಯ ವಶಕ್ಕೆ ಒಪ್ಪಿಸಲಾಯಿತು. ಈಗ ರಶ್ಮಿ ಶಾಲೆಗೆ ಹೋಗುತ್ತಿದ್ದಾಳೆ.

## ರೇಖಾಳ ದುರಂತ ಕಥೆ

ದೇಹದ ಶೇ. 95 ರಷ್ಟು ಭಾಗ ಸುಟ್ಟು ಹೋದ 11 ವರ್ಷದ ನತದೃಷ್ಟೆ ರೇಖಾ 2002 ಎಪ್ರಿಲ್ 21 ಕ್ಕೆ ಬೆಂಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಳು. ಬೆಂಗಳೂರಿನ ಶೇಷಾದ್ರಿಪುರದಲ್ಲಿ ವಾಸವಿರುವ ಪೊಲೀಸ್ ಪೇದೆ ರಮೇಶ್ ಮನೆಯಲ್ಲಿ ಆಕೆ ಮನೆಕೆಲಸಕ್ಕಿದ್ದಳು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಯ್ಯಾಗಿ ಹಳ್ಳಿಯಿಂದ ತಂದೆ ಹನುಮಯ್ಯನೇ ಮಗಳನ್ನು ತಂದು ಬಿಟ್ಟಿದ್ದ. ಆಗ ಹನುಮಯ್ಯ ರೂ. 500 ನ್ನು ಮುಂಗಡವಾಗಿ ಪಡೆದರು. ಮನೆ ಗುಡಿಸಿ ಒರೆಸುವುದು, ಪಾತ್ರೆಗಳನ್ನು ತೊಳೆಯುವುದು, ಅಂಗಡಿಯಿಂದ ಸಾಮಾನು ತರುವುದು ಇವೆಲ್ಲಾ ಕೆಲಸಗಳನ್ನು ರೇಖಾ ಮಾಡುತ್ತಿದ್ದಳು. ಅವಳ ಸಾವಿಗೆ ಕಾರಣ ಏನು ಎಂದು ತಿಳಿದು ಬಂದಿಲ್ಲ. ಅನೇಕ ನಾಗರಿಕ ಸಂಘ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನದ ನೇತೃತ್ವದಲ್ಲಿ ಜಮಾಯಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವಂತೆ ಒತ್ತಾಯಿಸಿದವು. ಸೇವಾ ನಡವಳಿಕೆ ನಿಯಮದ ಪ್ರಕಾರ ಮಕ್ಕಳನ್ನು ಮನೆಕೆಲಸಕ್ಕೆ ನೇಮಕ ಮಾಡಿದ ರಮೇಶ್ ವಿರುದ್ಧ ಇಲಾಖೆ ತನಿಖೆಗೆ ಆದೇಶಿಸಿತು. ರೇಖಾಳಂತೆ ಅನೇಕ ಮಕ್ಕಳು ಮನೆಕೆಲಸದ ಅದೃಶ್ಯ ದುಡಿಮೆಯಲ್ಲಿ ತೊಡಗಿಕೊಂಡಿದ್ದು ನಾಲ್ಕು ಗೋಡೆಗಳ ನಡುವೆ ನೋವುಣ್ಣುತ್ತಿದ್ದಾರೆ. ಈ ಮಕ್ಕಳಿಗೆ ಪುನರ್ವಸತಿ ಹಾಗೂ ಶಿಕ್ಷಣದ ಅವಕಾಶಗಳು ದೊರೆತರೆ ಅವರು ರೇಖಾಳಂತೆ ಸಾವನ್ನಪ್ಪಬೇಕಾದ ಪರಿಸ್ಥಿತಿ ಬರುವುದಿಲ್ಲ.

ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನಕ್ಕಾಗಿ ಚಳುವಳಿ ಅತ್ಯಂತ ಅವಶ್ಯಕ. ಸಮಾಜದ ಉತ್ತಮ ಅಭಿವೃದ್ಧಿ ಸಾಧಿಸಲು ಇದು ಅತ್ಯಂತ ಉಪಯುಕ್ತ ಕಾರ್ಯ.

**ಡಾ. ಕಯ್ಯಾರ ಕಿಞ್ಞಣ್ಣ ರೈ,** ಸಾಹಿತಿ, ಕಾಸರಗೋಡು.



## ಮಕ್ಕಳ ಹಕ್ಕುಗಳ ಒಡಂಬಡಿಕೆ

(Convention on the Rights of the Child)

1989 ನವಂಬರ್ 20 ರಂದು ವಿಶ್ವ ಸಂಸ್ಥೆಯು ಘೋಷಿಸಿದ ಈ ಜಾಗತಿಕ ಒಡಂಬಡಿಕೆಯು ಮಾನವ ಹಕ್ಕುಗಳನ್ನು ಎತ್ತಿಹಿಡಿಯುವ ಮಹತ್ವಪೂರ್ಣ ದಾಖಲೆಯಾಗಿದೆ. 1992 ಡಿಸಂಬರ್ 11ರಂದು ಭಾರತವು ಈ ಒಡಂಬಡಿಕೆಗೆ ಸಹಿ ಹಾಕಿತು. 54 ಅನುಚ್ಛೇದಗಳನ್ನು ಒಳಗೊಂಡ ಈ ಒಡಂಬಡಿಕೆಯನ್ನು ಜಾರಿಗೆ ತರಬೇಕಾದ ಬದ್ಧತೆ ಸರ್ಕಾರಕ್ಕಿದೆ. ಮಕ್ಕಳ ನಾಗರೀಕ, ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಕ್ಕುಗಳನ್ನು ಇದು ಒಳಗೊಂಡಿದೆ. ಇದನ್ನು ನಾಲ್ಕು ವಿಭಾಗಗಳಲ್ಲಿ ನೋಡಬಹುದು.

- ಬದುಕು / ಜೀವನ
- ರಕ್ಷಣೆ/ ಸುರಕ್ಷೆ
- ವಿಕಾಸ/ ಅಭಿವೃದ್ಧಿ
- ಭಾಗವಹಿಸುವಿಕೆ

**ಬದುಕುವ ಹಕ್ಕು ಎಂದರೆ :**

- ಬದುಕುವ ಹಕ್ಕು
- ಆರೋಗ್ಯದ ಉತ್ತಮ ಮಟ್ಟ
- ಪೌಷ್ಟಿಕತೆ
- ಸುಧಾರಿತ ಜೀವನ ಮಟ್ಟ
- ಹೆಸರು ಮತ್ತು ರಾಷ್ಟ್ರೀಯತೆ

**ವಿಕಾಸದ ಹಕ್ಕು ಎಂದರೆ :**

- ಶಿಕ್ಷಣದ ಹಕ್ಕು
- ಶೈಶವದ ಪೋಷಣೆ ಮತ್ತು ಅಭಿವೃದ್ಧಿಗೆ ಬೆಂಬಲ
- ಸಾಮಾಜಿಕ ಭದ್ರತೆ
- ವಿಶ್ರಾಂತಿ, ವಿನೋದ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಹಕ್ಕು

**ರಕ್ಷಣೆಯ ಹಕ್ಕು ಎಂದರೆ :**

- ಶೋಷಣೆ, ದುರ್ಬಳಕೆ, ಅಮಾನವೀಯ ಅಥವಾ ಹೀನಾಯವಾದ ನಡೆಸಿಕೊಳ್ಳುವಿಕೆ ಇವುಗಳಿಂದ ಸ್ವಾತಂತ್ರ್ಯ.
- ತುರ್ತು ಪರಿಸ್ಥಿತಿ ಮತ್ತು ಶಸ್ತ್ರಾಸ್ತ್ರ ಸಂಘರ್ಷ ಮುಂತಾದ ವಿಶೇಷ ಸಂದರ್ಭಗಳಲ್ಲಿ, ವಿಕಲಾಂಗತೆ ಇದ್ದಲ್ಲಿ ವಿಶೇಷ ರಕ್ಷಣೆ.

**ಭಾಗವಹಿಸುವಿಕೆಯ ಹಕ್ಕು ಎಂದರೆ :**

- ಮಕ್ಕಳ ಅಭಿಪ್ರಾಯಕ್ಕೆ ಗೌರವ
- ಅಭಿವ್ಯಕ್ತಿ ಸ್ವಾತಂತ್ರ್ಯ
- ಸೂಕ್ತವಾದ ಮಾಹಿತಿ ಪಡೆಯಲು ಅವಕಾಶ
- ವಿಚಾರಗಳ, ಪ್ರಜ್ಞೆಯ ಮತ್ತು ಧರ್ಮದ ಸ್ವಾತಂತ್ರ್ಯ

ಈ ಹಕ್ಕುಗಳನ್ನು ಅವುಗಳ ಸ್ವಭಾವಕ್ಕೆ ತಕ್ಕಂತೆ ಎರಡು ಭಾಗ ಮಾಡಬಹುದು : **ತುರ್ತು ಹಕ್ಕುಗಳು ಮತ್ತು ಪ್ರಗತಿಪರ ಹಕ್ಕುಗಳು.**

ರಕ್ಷಣೆಗೆ ಸಂಬಂಧಪಟ್ಟ ಎಲ್ಲ ಹಕ್ಕುಗಳೂ ತುರ್ತಾದವು. ಇನ್ನುಳಿದವು (ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳು) ಪ್ರಗತಿಪರವಾಗಿ ಜಾರಿಗೆ ತರಬೇಕಾದವು.

ಎಲ್ಲಾ ಇಲಾಖೆಗಳಲ್ಲೂ ಬಡವರಿಗಾಗಿ ಕಾರ್ಯಕ್ರಮಗಳಿವೆ. ಆದರೆ, ಶಾಲೆಯಿಂದ ಹೊರಗುಳಿದ ಮಕ್ಕಳು ಅಥವಾ ಬಾಲಕಾರ್ಮಿಕರ ಕುಟುಂಬಗಳು ಈ ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ.

**ಸಂಜೀವ್ ಕುಮಾರ್,** ರಾಷ್ಟ್ರೀಯ ಸಂಯೋಜಕರು,
ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್ಓ), ಬೆಂಗಳೂರು.

## ವೀರಪ್ಪ ಈಗ ಶಾಲೆಯಲ್ಲಿದ್ದಾನೆ

"ನಮ್ಮ ಅಪ್ನೋ ನಂಗೆ ನೀ ಇಸ್ಕೂಲ್‌ಗೋಗೋದು ಬೇಡ, ಸ್ವಾಮೇರ್ ಮನೇಲಿ ಮೇಕೆ ಕಾಯಕ್ಕೋಗು ಅಂತ ಜೋರ್ ಮಾಡಿ ಸ್ಕೂಲ್ ಬುಡುಸ್ಬುಟ್ಟ. ಹೊತ್ತಾರೆಂದ ಸಂಜೆಗಂಟ ಮೇಕೆ ಕಾಯಕ್ಕೋಗ್ತಿದ್ದೆ. ಯಜಮಾನ್ರತ್ರ ಅಪ್ಪ ದುಡ್ಡು ಇಸ್ಕೊಂಡೋಗ್ತಿದ್ದ. ಆಮೇಲೆ ಒಂದಿನ ಅಧ್ಯಕ್ಷರು ಬಂದು ಬುದ್ಧಿ ಯೇಳಿದ್ರು. ಅಪ್ಪ ಕೂಡ ಸ್ಕೂಲ್‌ಗೆ ಹೋಗು ಅಂತಂದ. ಕೊನೆಗೆ ಹದಡಿ ಹಾಸ್ಟೆಲ್‌ಗೆ ಸೇರ್ಕೊಂಡು ಮತ್ತೆ ಸ್ಕೂಲ್‌ಗೆ ಹೋಗೋಕೆ ಶುರು ಮಾಡ್ದೆ. ಇನ್ನು ಏನೇ ಆದ್ರೂ ನಾನು ಸ್ಕೂಲ್ ಬಿಡೋಲ್ಲ"
– ವೀರಪ್ಪ, 13 ವರ್ಷ, ಬಸವನಾಳು ಗ್ರಾಮ, ದಾವಣಗೆರೆ ತಾಲ್ಲೂಕು.
ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಪಂಚಾಯ್ತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ರಚಿಸಲ್ಪಟ್ಟ ಮಕ್ಕಳ ಹಕ್ಕುಗಳ ಕಾರ್ಯಪಡೆಯ ಕಾರ್ಯಾಚರಣೆಯಲ್ಲಿ ವೀರಪ್ಪನನ್ನು ಪತ್ತೆ ಹಚ್ಚಿ ರಕ್ಷಿಸಲಾಯಿತು. ಈಗ ವೀರಪ್ಪ ಶಾಲೆಯಲ್ಲಿದ್ದಾನೆ. ಗ್ರಾಮಪಂಚಾಯ್ತಿ ಬಾಲಕಾರ್ಮಿಕರ ಮತ್ತು ಶಾಲಾ ಮಕ್ಕಳ ಕುಂದುಕೊರತೆಗಳನ್ನು ನಿಯಮಿತವಾಗಿ ಚರ್ಚೆ ಮಾಡುತ್ತದೆ. ಮತ್ತು ಸೂಕ್ತವಾದ ತೀರ್ಮಾನ ತೆಗೆದುಕೊಳ್ಳುತ್ತದೆ. ಮಕ್ಕಳ ಹಕ್ಕುಗಳ ಕಾರ್ಯಪಡೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಸಕ್ರಿಯವಾಗಿದೆ.

ನಮ್ಮ ಸಂಘದ ಯಾವ ಸದಸ್ಯರ ಮನೆಯಲ್ಲೂ ದುಡಿಯುವ ಮಕ್ಕಳಿಲ್ಲ. ಎಲ್ಲಾ ಮಕ್ಕಳೂ ಶಾಲೆಗೆ ಹೋಗುತ್ತಿದ್ದಾರೆ. ದುಡಿಯುವ ಮಕ್ಕಳನ್ನು ಕಂಡರೆ ನಾವೇ ಶಾಲೆಗೆ ಸೇರಿಸುತ್ತೇವೆ.

**ಸರಸ್ವತಿ ನಾಡಗೌಡ,**
ಸದಸ್ಯೆ, ಶಾರದಾದೇವಿ ಮಹಿಳಾ ಸಂಘ,
ಮಳವಳ್ಳಿ, ಮಂಡ್ಯ ಜಿಲ್ಲೆ.



# ಅಧ್ಯಾಯ 4

## ಶಿಕ್ಷಣ ಮತ್ತು ಬಾಲಕಾರ್ಮಿಕ ಪದ್ಧತಿ : ಸರ್ಕಾರದ ಯೋಜನೆಗಳು

ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಕಡ್ಡಾಯ ಶಿಕ್ಷಣ ಪರಿಣಾಮಕಾರಿ ಅಸ್ತ್ರವಾಗಿದೆ. ಎಲ್ಲಾ ಮಕ್ಕಳೂ ಶಾಲೆಯಲ್ಲಿದ್ದರೆ, ಬಾಲಕಾರ್ಮಿಕತೆಯ ಪ್ರಸಂಗವೇ ಬರುವುದಿಲ್ಲ. ಮಕ್ಕಳ ಶೋಷಣೆ ತಡೆಗಟ್ಟಲು ಸರ್ಕಾರ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಶಿಕ್ಷಣ ಇಲಾಖೆ ಹೆಚ್ಚಿನ ಪ್ರಮಾಣದಲ್ಲಿ ಮಕ್ಕಳ ಕಲ್ಯಾಣ ಯೋಜನೆಗಳನ್ನು ಜಾರಿ ಮಾಡುತ್ತಿವೆ. ದುರಂತವೇನೆಂದರೆ, ಈ ಯೋಜನೆಗಳು ಅನೇಕ ಮಕ್ಕಳ ಪಾಲಿಗೆ ಗಗನ ಕುಸುಮವಾಗಿಯೇ ಉಳಿದಿವೆ. ಇವುಗಳನ್ನು ಅರ್ಹ ಮಕ್ಕಳಿಗೆ ತಲುಪಿಸಲು ನಾಗರಿಕ ಸಂಘ ಸಂಸ್ಥೆಗಳು ಮುಂದಾದಲ್ಲಿ ಅನೇಕ ಮಕ್ಕಳ ಬದುಕಿನಲ್ಲಿ ಬೆಳಕು ಮೂಡಿಸಿದಂತಾಗುತ್ತದೆ. ದುಡಿಯುವ ಮಕ್ಕಳ ಪುನರ್ವಸತಿಗೆ ಅನುಕೂಲ ವಾಗಬಲ್ಲ ಕೆಲವು ಪ್ರಮುಖ ಯೋಜನೆಗಳ ಪಕ್ಷಿನೋಟ ಇಲ್ಲಿದೆ.

## ಸರ್ವ ಶಿಕ್ಷಣ ಅಭಿಯಾನ

ಶಿಕ್ಷಣ ಇಲಾಖೆಯು 2002ರಲ್ಲಿ ಪ್ರಾರಂಭಿಸಿದ ಸರ್ವ ಶಿಕ್ಷಾ ಅಭಿಯಾನ (ಎಸ್‌ಎಸ್‌ಎ) ಕರ್ನಾಟಕದಲ್ಲಿ ಹಲವು ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ದೇಶದ ಎಲ್ಲ ಮಕ್ಕಳಿಗೂ ಶಿಕ್ಷಣ ನೀಡುವ ಉದ್ದೇಶದಿಂದ ಕಡುಬಡತನದಲ್ಲಿರುವ ಗ್ರಾಮೀಣ ಮಕ್ಕಳನ್ನು ಹಾಗೂ ನಗರ ಪ್ರದೇಶಗಳ ಸ್ಲಂ ನಿವಾಸಿ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಅನೇಕ ಯೋಜನೆ–ಕಾರ್ಯಕ್ರಮಗಳನ್ನು ರೂಪಿಸಲಾಗಿದೆ:

- ❖ ಸಮುದಾಯದತ್ತ ಶಾಲೆ
- ❖ ಬಾ ಮರಳಿ ಶಾಲೆಗೆ
- ❖ ಬಾ ಬಾಲೆ ಶಾಲೆಗೆ
- ❖ ಕೂಲಿಯಿಂದ ಶಾಲೆಗೆ
- ❖ ಚಿಣ್ಣರ ಅಂಗಳ

ಮುಂತಾದುವುಗಳನ್ನು ಪ್ರತಿವರ್ಷ ಹಮ್ಮಿಕೊಳ್ಳಲಾಗುತ್ತದೆ.

ಇದಲ್ಲದೆ, ಮಕ್ಕಳಿಗಾಗಿ ಸಂಚಾರಿ ಶಾಲೆ, ಹೆಣ್ಣುಮಕ್ಕಳಿಗೆ ವಸತಿ ನಿಲಯಗಳು (ಗ್ರಾಮಾಂತರ ಮಕ್ಕಳಿಗೆ), ಬಾಲಕಾರ್ಮಿಕರ ಪುನರ್ವಸತಿ ಯೋಜನೆ, ನವೋದಯ ಶಾಲೆಗಳು, ಆರ್ಥಿಕ ಸಂಕಷ್ಟದಲ್ಲಿರುವ ಮಕ್ಕಳಿಗೆ ಶಿಷ್ಯ ವೇತನ, ಬೀದಿ ಮಕ್ಕಳ ಕಲ್ಯಾಣ, ಬಾಲಿಕಾ ಸಮೃದ್ಧಿ ಯೋಜನೆ, ನಿರ್ಗತಿಕ ಮಕ್ಕಳಿಗೆ ಕುಟೀರಗಳು, ಬಾಲಸೇವಾ ಸಂಸ್ಥೆ, ಬಾಲಕಿಯರ ಮತ್ತು ಬಾಲಕರ ಬಾಲಮಂದಿರಗಳು, ವೀಕ್ಷಣಾಲಯಗಳು, ಭಾಗ್ಯಲಕ್ಷ್ಮಿ ಯೋಜನೆ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ), ಆಶ್ರಮ ಶಾಲೆಗಳು (ಸಮಾಜ ಕಲ್ಯಾಣ ಇಲಾಖೆ), ಮೊರಾರ್ಜಿ ದೇಸಾಯಿ ಶಾಲೆಗಳು (ಜಿಲ್ಲಾ ಪಂಚಾಯ್ತಿ), ಮೆಟ್ರಿಕ್ ಪೂರ್ವ ವಸತಿ ನಿಲಯಗಳು (ಹಿಂದುಳಿದ ವರ್ಗದ ಇಲಾಖೆ) ಮುಂತಾದ ಕಾರ್ಯಕ್ರಮಗಳೂ ಇವೆ. ಮಕ್ಕಳಿಗೆ ಉಚಿತ ಸಮವಸ್ತ್ರ, ಶಾಲಾ ಬ್ಯಾಗ್, ನೋಟ್ ಪುಸ್ತಕಗಳು, ಪಠ್ಯ ಪುಸ್ತಕಗಳು, ಮಧ್ಯಾಹ್ನದ ಬಿಸಿಯೂಟ, ಸೈಕಲ್, ಹೆಣ್ಣುಮಕ್ಕಳಿಗೆ ಉಚಿತ ಶಿಕ್ಷಣ (ಏಳನೇ ತರಗತಿವರೆಗೆ) ಮುಂತಾದುವುಗಳನ್ನು ನೀಡಲಾಗುತ್ತಿದೆ.

ಮಕ್ಕಳಿಗೆ ಸಂಬಂಧಪಟ್ಟ ಈ ಯೋಜನೆಗಳು ಮತ್ತು ಹೊಸ ಯೋಜನೆಗಳ ಪ್ರಯೋಜನ ಪಡೆಯಲು ಆಯಾ ಶಾಲೆಗಳ ಮುಖ್ಯೋಪಾಧ್ಯಾಯರು ಅಥವಾ ಇಲಾಖೆಗಳ ಸಹಾಯಕ ನಿರ್ದೇಶಕರನ್ನು ಭೇಟಿ ಮಾಡಬಹುದು. ಈ ನಿಟ್ಟಿನಲ್ಲಿ ಪ್ರತಿ ಜಿಲ್ಲಾ ಕೇಂದ್ರದಲ್ಲೂ ಇಲಾಖಾ ಕಛೇರಿಗಳು ಕೆಲಸ ನಿರ್ವಹಿಸುತ್ತಿವೆ.

## ಬಾಲಕಾರ್ಮಿಕರ ಪುನರ್ವಸತಿಗಾಗಿ ಯೋಜನೆಗಳು

ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ (ಎನ್‌ಸಿಎಲ್‌ಪಿ) ಮತ್ತು ರಾಜ್ಯ

ಬಾಲಕಾರ್ಮಿಕ ಯೋಜನೆ (ಎಸ್‌ಸಿಎಲ್‌ಪಿ) ಬಾಲಕಾರ್ಮಿಕರ ಪುನರ್ವಸತಿಗಾಗಿ ರೂಪುಗೊಂಡ ಯೋಜನೆಗಳು. 14 ವರ್ಷದೊಳಗಿನ ಮಕ್ಕಳನ್ನು ಈ ಯೋಜನೆಯಡಿ ಪುನರ್ವಸತಿ ಮಾಡಲಾಗುತ್ತದೆ.

**ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ NCLP :** ಈ ಯೋಜನೆಯನ್ನು 1996ರಲ್ಲಿ ಕೇಂದ್ರ ಕಾರ್ಮಿಕ ಸಚಿವಾಲಯ ಪ್ರಾರಂಭಿಸಿದೆ. ಪ್ರಸ್ತುತ 200 ಜಿಲ್ಲೆಗಳಲ್ಲಿ ಈ ಯೋಜನೆ ಜಾರಿಯಲ್ಲಿದೆ. ಈ ಯೋಜನೆಯಡಿಯಲ್ಲಿ ಬಾಲಕಾರ್ಮಿಕರ ಪುನರ್ವಸತಿ ಶಾಲೆಗಳನ್ನು ಸಂಘ–ಸಂಸ್ಥೆಗಳ ಮೂಲಕ ತೆರೆಯಲಾಗಿದೆ. ಕೆಲಸದಿಂದ ಮುಕ್ತರಾದ ಮಕ್ಕಳಿಗೆ ಸೇತುಬಂಧ ಶಾಲೆಗಳಿವೆ.

## ರಾಜ್ಯ ಬಾಲಕಾರ್ಮಿಕ ನಿರ್ಮೂಲನಾ ಕ್ರಿಯಾ ಯೋಜನೆ SCLP

ಕರ್ನಾಟಕ ಸರ್ಕಾರ 2002ರಲ್ಲಿ ಪ್ರಾರಂಭಿಸಿದ ಈ ಯೋಜನೆಯನ್ನು 2007ರಲ್ಲಿ ಮುಕ್ತಾಯಗೊಳಿಸುವುದಾಗಿ ನಿರ್ಧರಿಸಲಾಗಿತ್ತು. ಆದರೆ ಈ ಯೋಜನೆಯನ್ನು ಮತ್ತೆ 5 ವರ್ಷಕ್ಕೆ ಮುಂದುವರೆಸಲಾಗಿದೆ. ಈ ಯೋಜನೆಯಡಿಯಲ್ಲಿ ಬಾಲಕಾರ್ಮಿಕರ ಪುನರ್ವಸತಿ ಶಾಲೆಗಳನ್ನು ತೆರೆಯಲಾಗಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳನ್ನು ರಚಿಸಿ ಈ ಯೊಜನೆಯನ್ನು ಜಾರಿಗೊಳಿಸಲಾಗಿದೆ. ಇದರ ಜಾರಿಗಾಗಿ ಯೋಜನಾ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗ ಸೇರಿದ ಒಂದು ತಂಡವು ಪ್ರತಿ ಜಿಲ್ಲೆಯಲ್ಲಿ ಕಾರ್ಯಪ್ರವೃತ್ತವಾಗಿದೆ. ರಾಷ್ಟ್ರೀಯ ಬಾಲಕಾರ್ಮಿಕ ನಿರ್ಮೂಲನಾ ಯೋಜನೆಯು ಈ ಸೊಸೈಟಿಯ ಮೂಲಕ ಜಾರಿಯಾಗುತ್ತಿದೆ. ಕರ್ನಾಟಕವನ್ನು ಸಂಪೂರ್ಣವಾಗಿ ಬಾಲಕಾರ್ಮಿಕ ಪದ್ಧತಿ ಮುಕ್ತ ರಾಜ್ಯವನ್ನಾಗಿಸಲು ಸಂಕಲ್ಪ ಮಾಡಲಾಗಿದ್ದು, 2012ರವರೆಗೆ ಈ ಯೋಜನೆಯನ್ನು ಮುಂದುವರೆಸ ಲಾಗಿದೆ.

> ಎನ್‌ಸಿಎಲ್‌ಪಿ ಮತ್ತು ಎಸ್‌ಸಿಎಲ್‌ಪಿ ಯೋಜನೆಗಳ ಮೂಲಕ 2001–02ರಿಂದ 2007–08 ರವರೆಗಿನ ಅವಧಿಯಲ್ಲಿ 84,858 ಬಾಲಕಾರ್ಮಿಕರನ್ನು ಕೆಲಸದಿಂದ ಮುಕ್ತಗೊಳಿಸಿ, ಪುನರ್ವಸತಿ ಕಲ್ಪಿಸಲಾಗಿದೆ. ಈ ಅವಧಿಯಲ್ಲಿ ಮಾಲೀಕರ ಮೇಲೆ 17,480 ಮೊಕದ್ದಮೆಗಳು ದಾಖಲಾಗಿದ್ದವು. 733 ಪ್ರಕರಣಗಳಲ್ಲಿ ಶಿಕ್ಷೆಯನ್ನೂ ವಿಧಿಸಲಾಗಿತ್ತು. ಈವರೆಗೆ ಮಾಲೀಕರಿಂದ ರೂ.54,38,635 ದಂಡ ವಸೂಲು ಮಾಡಲಾಗಿದೆ.
>
> *ಬಾಲಕಾರ್ಮಿಕ ಪದ್ಧತಿಯ ಕುರಿತ ಉನ್ನತಾಧಿಕಾರ ಸಮಿತಿ ಸಭೆ, 17 ಸೆಪ್ಟೆಂಬರ್ 2008, ಕರ್ನಾಟಕ ಸರ್ಕಾರ.*



# ಅಧ್ಯಾಯ 5

# ನಾಗರಿಕ ಸಂಘ ಸಂಸ್ಥೆಗಳ (ಸಿಎಸ್‌ಓ) ಪಾತ್ರ ಮತ್ತು ಜವಾಬ್ದಾರಿ

ಸಮುದಾಯದ ಯಾವುದೇ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸ್ಥಳೀಯ ನಾಗರಿಕ ಸಂಘ ಸಂಸ್ಥೆಗಳು ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಇತ್ತೀಚಿನ ದಿನಗಳಲ್ಲಿ ಇದರ ಮಹತ್ವ ಎಲ್ಲರಿಗೂ ಅರಿವಾಗುತ್ತಿದೆ. ಕಾನೂನು, ಆಡಳಿತ ಮತ್ತು ಯೋಜನೆಗಳಿಂದ ಬಗೆಹರಿಸಲು ಸಾಧ್ಯವಾಗದ ಹಲವಾರು ಸಮಸ್ಯೆಗಳು ನಾಗರಿಕ ಸಂಘ ಸಂಸ್ಥೆಗಳಿಂದ ಸಾಧ್ಯವಾಗುತ್ತಿವೆ. ಬಾಲಕಾರ್ಮಿಕರ ಪುನರ್ವಸತಿ ಮತ್ತು ಅವರ ಉತ್ತಮ ಭವಿಷ್ಯಕ್ಕೆ ನಾಗರಿಕ ಸಂಘ ಸಂಸ್ಥೆಗಳು ಪರಿಣಾಮಕಾರಿ ಹೆಜ್ಜೆ ಇಟ್ಟಿರುವ ಅನೇಕ ಉದಾಹರಣೆಗಳಿವೆ.

## ನಾಗರಿಕ ಸಂಘ ಸಂಸ್ಥೆ (ಸಿಎಸ್‌ಓ) ಎಂದರೇನು ?

ಸಮಾಜದಲ್ಲಿ ಸ್ವಯಂ ಪ್ರೇರಿತರಾಗಿ ಸಮುದಾಯದ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಅಥವಾ ನಿರ್ದಿಷ್ಟ ಗುರಿಯನ್ನು ಸಾಧಿಸಲು ಸಂಘಟಿಸಲ್ಪಟ್ಟ / ನೋಂದಾಯಿಸಲ್ಪಟ್ಟ ಅಥವಾ ನೋಂದಾಯಿಸಲ್ಪಡದ ಸಂಘ / ಸಂಸ್ಥೆ / ಗುಂಪು / ತಂಡ.

### ನಮ್ಮ ಸುತ್ತಮುತ್ತಲಿರುವ ಸಂಘಸಂಸ್ಥೆಗಳು

- ರೆಸಿಡೆನ್ಶಿಯಲ್ ವೆಲ್‌ಫೇರ್ ಅಸೋಸಿಯೇಶನ್‌ಗಳು
- ಕಾರ್ಮಿಕ ಸಂಘಟನೆಗಳು
- ಮಹಿಳಾ ಸಂಘಗಳು ಮತ್ತು ಒಕ್ಕೂಟಗಳು
- ಯುವ ಸಂಘಟನೆಗಳು ಮತ್ತು ಒಕ್ಕೂಟಗಳು
- ಕೊಳಗೇರಿ ನಿವಾಸಿಗಳ ಸಂಘಟನೆಗಳು
- ಸರ್ಕಾರಿ ನೌಕರರ ಸಂಘಟನೆಗಳು
- ನಿವೃತ್ತ ಸರ್ಕಾರಿ ನೌಕರರ ಸಂಘಟನೆಗಳು
- ದಿನಗೂಲಿ ನೌಕರರ ಸಂಘಟನೆಗಳು
- ಖಾಸಗಿ / ಸರ್ಕಾರಿ ಶಿಕ್ಷಕರ ಸಂಘಟನೆಗಳು
- ರೋಟರಿ ಕ್ಲಬ್, ಲಯನ್ಸ್ ಕ್ಲಬ್, ಜೇಸೀಸ್ ಕ್ಲಬ್
- ರೈತ ಸಂಘಟನೆಗಳು
- ವೃತ್ತಿಪರರ (ವೈದ್ಯರು, ವಕೀಲರು, ಪತ್ರಕರ್ತರು, ಛಾಯಾಗ್ರಾಹಕರು ಇತ್ಯಾದಿ) ಸಂಘಟನೆಗಳು
- ವ್ಯಾಪಾರಿ ಸಂಘಟನೆಗಳು
- ಧಾರ್ಮಿಕ ಮತ್ತು ಸಮುದಾಯವಾರು ಸಂಘಟನೆಗಳು
- ವಿವಿಧ ಸಮುದಾಯ ಸಂಘಟನೆಗಳು
- ಆಟೋ ಚಾಲಕರ ಮತ್ತು ಮಾಲೀಕರ ಸಂಘಟನೆಗಳು
- ಅಂಗಡಿ ಮಾಲೀಕರ ಸಂಘಟನೆಗಳು
- ಹೋಟೆಲ್ ಮಾಲೀಕರ ಸಂಘ
- ಹಾಲು ಉತ್ಪಾದಕರ ಸಂಘ



## ಅಡ್ವೊಕಸಿಯಲ್ಲಿ ಸಿಎಸ್‌ಓಗಳ ಪಾತ್ರ

ಒಂದು ವಿಚಾರಕ್ಕೆ ಸಂಬಂಧಿಸಿದಂತೆ ಜನನಾಯಕರಲ್ಲಿ ಮತ್ತು ಅಧಿಕಾರಿಗಳಲ್ಲಿ ಅರಿವು ಮೂಡಿಸಿ ಅದರ ಪರವಾದ ಅಭಿಪ್ರಾಯ ಹುಟ್ಟು ಹಾಕುವುದು ಮತ್ತು ನೀತಿ–ನಿಯಮಗಳಲ್ಲಿ ಬದಲಾವಣೆ ತರುವುದನ್ನು ಅಡ್ವೊಕಸಿ ಎನ್ನಬಹುದು. ಇದಕ್ಕಾಗಿ ಸಾರ್ವಜನಿಕ ಕಾರ್ಯಕ್ರಮಗಳು, ಪತ್ರಿಕೆ ಪ್ರಕಾಶನ, ಬರವಣಿಗೆ, ವಿಚಾರ ಸಂಕಿರಣ, ಚಳುವಳಿ ಮುಂತಾದವು ಹಮ್ಮಿಕೊಳ್ಳಬಹುದು. ವಿವಿಧ ಅಂತಾರಾಷ್ಟ್ರೀಯ ಒಡಂಬಡಿಕೆಗಳು, ಸಂವಿಧಾನ ಮತ್ತು ಕಾನೂನಿನ ನೆರವಿನೊಂದಿಗೆ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸಂಬಂಧಿಸಿದಂತೆ ಅಡ್ವೊಕಸಿಯನ್ನು ಸಿಎಸ್‌ಓಗಳು ಕೈಗೆತ್ತಿಕೊಳ್ಳಬಹುದಾಗಿದೆ.

- ಪ್ರಸ್ತುತ ಇರುವಂತಹ ಬಾಲಕಾರ್ಮಿಕ ನೀತಿಯಲ್ಲಿ ಬದಲಾವಣೆಗಾಗಿ ಸರ್ಕಾರವನ್ನು ಒತ್ತಾಯಿಸುವುದು.
- ಬಾಲಕಾರ್ಮಿಕ ಪದ್ಧತಿಯ ತುರ್ತು ನಿರ್ಮೂಲನೆಗಾಗಿ ಸೂಕ್ತವಾದ ಹೊಸ ಕಾರ್ಯಕ್ರಮಗಳನ್ನು ರೂಪಿಸುವಂತೆ ಮತ್ತು ಅದಕ್ಕೆ ಸಾಕಷ್ಟು ಹಣ ಒದಗಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರುವುದು.
- ಬಾಲಕಾರ್ಮಿಕ ನಿಷೇಧ ಕಾನೂನನ್ನು ಸಮರ್ಪಕವಾಗಿ ಜಾರಿ ಮಾಡಲು ಒತ್ತಾಯಿಸುವುದು.
- ಐಎಲ್‌ಓದ 138ನೇ ಮತ್ತು 182ನೇ ಒಡಂಬಡಿಕೆಗಳು ಮತ್ತು ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಹೆಚ್ಚು ಪ್ರಚಾರ ನೀಡುವುದು.
- ಜನಪ್ರತಿನಿಧಿಗಳು, ಸರ್ಕಾರಿ ಅಧಿಕಾರಿಗಳು, ನ್ಯಾಯಾಂಗ ಸದಸ್ಯರು, ಮಾಧ್ಯಮ ವರ್ಗದವರೊಂದಿಗೆ ಬಾಲಕಾರ್ಮಿಕ ಪದ್ಧತಿಗೆ ಸಂಬಂಧಿಸಿದಂತೆ ಚರ್ಚಿಸುವುದು.

- ಬಾಲಕಾರ್ಮಿಕ ಪದ್ಧತಿ ವಿರೋಧೀ ಕಾರ್ಯಕ್ರಮಗಳು ಮತ್ತು ಮಕ್ಕಳಿಗೆ ಸಂಬಂಧಿಸಿದ ಇತರೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಈ ವಿಚಾರಕ್ಕೆ ಹೆಚ್ಚು ಪ್ರಚಾರ ನೀಡುವುದು.
- ಸಿಎಸ್‌ಓಗಳ ಸುತ್ತಮುತ್ತ ಜಾರಿಯಲ್ಲಿರುವ ಬಾಲಕಾರ್ಮಿಕ ಪುನರ್ವಸತಿ ಕಾರ್ಯಕ್ರಮಗಳನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಸೂಕ್ತ ಸಲಹೆ–ನೆರವು ನೀಡುವುದು.
- ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ಕಾರ್ಯಕ್ರಮಕ್ಕೆ ಹಣ, ವಿದ್ಯಾರ್ಥಿ ವೇತನ, ಸಿಬ್ಬಂದಿ ಮುಂತಾದ ರೀತಿಯಲ್ಲಿ ಸಂಪನ್ಮೂಲ ಒದಗಿಸುವುದು.
- ಮಕ್ಕಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಬಹುಜನರನ್ನು ಒಟ್ಟುಗೂಡಿಸುವುದು.
- ಬಾಲಕಾರ್ಮಿಕ ಪದ್ಧತಿಯ ಕುರಿತು ವಾರ್ತಾ ಪತ್ರಿಕೆ ಹೊರಡಿಸುವುದು, ದಿನಪತ್ರಿಕೆಗಳು ಮತ್ತು ನಿಯತಕಾಲಿಕಗಳಲ್ಲಿ ಬರೆಯುವುದು, ರಾಷ್ಟ್ರಪತಿ, ಪ್ರಧಾನಿ ಮತ್ತು ಸಚಿವರಿಗೆ ಪತ್ರಗಳನ್ನು ಕಳುಹಿಸುವುದು.
- ಎಲ್ಲಾ ಸದಸ್ಯರಿಗೂ ಬಾಲಕಾರ್ಮಿಕ ಪದ್ಧತಿ ಕುರಿತಂತೆ ಸಂಪೂರ್ಣ ಮಾಹಿತಿ ತಲುಪುವಂತೆ ನೋಡಿಕೊಳ್ಳುವುದು.

## ಎಲ್ಲರಿಗೂ ಮಾದರಿಯಾದ ಮಹಿಳಾ ಸಂಘದ ಕ್ರಮ

ದಾವಣಗೆರೆ ಜಿಲ್ಲೆಯ ದೊಡ್ಡಬಾತಿಯ ಉಡ್ಸಲಮ್ಮ ಮಹಿಳಾ ಸಂಘದ ಮಾದರಿ ಚಟುವಟಿಕೆಗಳಿಗೆ ಜಿಲ್ಲಾಡಳಿತವು ಪ್ರಶಸ್ತಿ ನೀಡಿ ಗೌರವಿಸಿತು. ದೊಡ್ಡಬಾತಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಕೃಷಿ, ಹೋಟೆಲ್, ಮನೆಗೆಲಸ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದ 16 ಮಕ್ಕಳನ್ನು ಸಂಘದ ಸದಸ್ಯರು ಬಿಡುಗಡೆಗೊಳಿಸಿ ಶಾಲೆಗೆ ಸೇರಿಸಿದ್ದರು. ಈ ಮಕ್ಕಳನ್ನು ಬಿಡುಗಡೆ ಮಾಡಲು ಸಂಘ ಎರಡು ತಿಂಗಳು ಸತತ ಪ್ರಯತ್ನ ನಡೆಸಿತ್ತು. ಈ 16 ಮಕ್ಕಳಲ್ಲಿ 8 ಮಕ್ಕಳ ಮೇಲುಸ್ತುವಾರಿಯನ್ನು ಸಂಘವೇ ವಹಿಸಿಕೊಂಡಿದೆ. ಉಳಿದ ಮಕ್ಕಳ ಜವಾಬ್ದಾರಿಯನ್ನು ಗ್ರಾಮ ಪಂಚಾಯ್ತಿ ವಹಿಸಿಕೊಂಡಿದೆ. 2007ರಲ್ಲಿ ದಾವಣಗೆರೆಯಲ್ಲಿ ಮಹಿಳಾ ಸಂಘ ತನ್ನ ಸದಸ್ಯರಿಗೆ ನಡೆಸಿದ ಕಾರ್ಯಾಗಾರದಲ್ಲಿ ಜಿಲ್ಲಾಧಿಕಾರಿಗಳ ಕರೆಯನ್ನು ಸವಾಲಾಗಿ ಸ್ವೀಕರಿಸಿದ ಉಡ್ಸಲಮ್ಮ ಸಂಘದವರು ಇತರೆ ಸಂಘಗಳಿಗೆ ಮಾದರಿಯಾಗುವಂತೆ ಕೆಲಸ ಮಾಡಿದೆ. ಇದನ್ನು ಗುರುತಿಸಿದ ಜಿಲ್ಲಾಡಳಿತವು ಪ್ರಶಸ್ತಿ ನೀಡಿ ಗೌರವಿಸಿದೆ.

# ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಯಲ್ಲಿ ನಾಗರಿಕ ಸಂಘ ಸಂಸ್ಥೆಗಳ (ಸಿಎಸ್‌ಓ) ಪಾತ್ರ


- ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಮತ್ತು ವಿರೋಧಿಸುವುದು.
- 'ಯಾವುದೇ ಮಕ್ಕಳನ್ನು ದುಡಿಮೆಗೆ ಇಟ್ಟುಕೊಳ್ಳುವುದಿಲ್ಲ ಮತ್ತು ದುಡಿಮೆಗೆ ಕಳುಹಿಸುವುದಿಲ್ಲ' ಎಂಬ ಘೋಷಣಾ ಫಲಕಗಳನ್ನು ಸಿಎಸ್‌ಓ ಕಛೇರಿ ಮತ್ತು ಸ್ವಂತ ಮನೆಗಳಲ್ಲಿ ತೂಗು ಹಾಕುವುದು.
- ಬಾಲಕಾರ್ಮಿಕ ಪದ್ಧತಿಯ ಕುರಿತು ತಮ್ಮ ಸದಸ್ಯರನ್ನು ಸಂವೇದನಾಶೀಲರನ್ನಾಗಿಸುವುದು, ಜಾಗೃತರನ್ನಾಗಿಸುವುದು.
- ಸಿಎಸ್‌ಓಗಳ ಸಭೆ-ಸಮಾರಂಭಗಳಲ್ಲಿ 'ಬಾಲಕಾರ್ಮಿಕ ಪದ್ಧತಿ ನಿಲ್ಲಿಸಿ' ಎನ್ನುವ ಜಾಗೃತಿ ಘೋಷಣೆಗಳನ್ನು ಪ್ರದರ್ಶಿಸುವುದು.
- ಮಕ್ಕಳನ್ನು ಯಾರಾದರೂ ದುಡಿಸುತ್ತಿರುವುದು ತಿಳಿದು ಬಂದಲ್ಲಿ ಕೂಡಲೇ ಸಿಎಸಿಎಲ್-ಕೆಗೆ, ಮಕ್ಕಳ ಸಹಾಯವಾಣಿಗೆ (1098), ಸೂಕ್ತ ಇಲಾಖೆ ಅಥವಾ ಈ ಕುರಿತು ಕಾರ್ಯನಿರ್ವಹಿಸುವ ಸಂಘ ಸಂಸ್ಥೆಗಳಿಗೆ ಮಾಹಿತಿ ರವಾನಿಸುವುದು. ಸಾಧ್ಯವಾದಲ್ಲಿ ತಾವೇ ಇಂತಹ ಪ್ರಕರಣಗಳನ್ನು ಕೈಗೆತ್ತಿಕೊಳ್ಳುವುದು.
- ಬಾಲಕಾರ್ಮಿಕ ಪದ್ಧತಿಯ ವಿರುದ್ಧದ ಸಹಿ ಸಂಗ್ರಹಣಾ ಅಭಿಯಾನಕ್ಕೆ ಸಂಪೂರ್ಣ ಸಹಕಾರ ನೀಡುವುದು.
- ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಶ್ರಮಿಸುವ ವಿವಿಧ ಸಂಘ ಸಂಸ್ಥೆಗಳಿಗೆ ಸಹಕಾರ ನೀಡುವುದು.
- ಸ್ಥಳೀಯವಾಗಿ ಬಾಲಕಾರ್ಮಿಕ ಪದ್ಧತಿಯ ಕುರಿತು ತಿಳಿವಳಿಕೆ ಮೂಡಿಸುವ ಸಂಪನ್ಮೂಲ ಸಂಸ್ಥೆಗಳಾಗಿಯೂ ಕೆಲಸ ಮಾಡುವುದು.
- ಹಳ್ಳಿ, ಪಟ್ಟಣ, ಕೊಳಗೇರಿ ಪ್ರದೇಶ, ನಗರಗಳಲ್ಲಿ ಮತ್ತು ಜಾತ್ರೆ, ಹಬ್ಬ, ಸಂತೆ, ಇತರೆ ವಿಶೇಷ ದಿನ ಸಂದರ್ಭಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಹಾಗೂ ಎಲ್ಲೆಡೆ ಈ ಬಗ್ಗೆ ಪ್ರಸ್ತಾಪಿಸಿ ಜಾಗೃತಿ ಮೂಡಿಸುವುದು.
- ವೈಯಕ್ತಿಕವಾಗಿ ನಿಮ್ಮ ಊರು, ಕೇರಿ, ಪಟ್ಟಣದ ಶಾಲೆಗಳಿಗೆ ಭೇಟಿ ನೀಡುವುದು ಮತ್ತು ಈ ವಿಚಾರದಲ್ಲಿ ಶಾಲೆಗಳೊಂದಿಗೆ ಸಹಕರಿಸುವುದು.
- ಸಿಎಸಿಎಲ್-ಕೆ ಸದಸ್ಯರಾಗಿ ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನದ ಪರ ತಮ್ಮ ನಿಲುವು ವ್ಯಕ್ತಪಡಿಸುವುದು.
- ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಕರ್ನಾಟಕ ರಾಜ್ಯ ಸಿಎಸ್‌ಓ ಸದಸ್ಯತ್ವ ಪಡೆದು ಕ್ರಿಯಾಶೀಲರಾಗುವುದು.

## ವಿಜಯ್ ಶಾಲೆಗೆ ಮರಳಿದ

12 ವರ್ಷದ ವಿಜಯ್ ಗೋವಾದ ವಾಸ್ಕೋದಲ್ಲಿ ಬಾಲಕಾರ್ಮಿಕನಾಗಿದ್ದ. ವಿದ್ಯಾಭ್ಯಾಸ ಮೂರನೇ ತರಗತಿ. ಉತ್ತರ ಕನ್ನಡ ಜಿಲ್ಲೆಯ ಸೂಪ ಇವನ ಊರು. ಸೂಪ ಅಣೆಕಟ್ಟು ಬಂದಾಗ ಸ್ಥಳಾಂತರಗೊಂಡವರಲ್ಲಿ ವಿಜಯನ ಕುಟುಂಬವೂ ಒಂದು. ಸೂಪದಿಂದ ಗೌಡೆವಾಡಕ್ಕೆ ಬಂದಾಗ ಅಲ್ಲಿಯ ಜಮೀನ್ದಾರರೊಬ್ಬರ ತೋಟದಲ್ಲಿ ಅವರಿಗೆ ವಾಸಕ್ಕೊಂದು ಜಾಗ ಮತ್ತು ಕೆಲಸ ಸಿಕ್ಕಿತು. ಜಮೀನ್ದಾರರು ಆಗಾಗ್ಗೆ ಹಣ ಸಾಲ ಕೊಡುತ್ತಿದ್ದರು. ವಿಜಯನ ಅಣ್ಣ ಪ್ರಭಾಕರ ತಿಂಗಳಿಗೆ ರೂ. 400–500 ಸಂಪಾದನೆ ಮಾಡುತ್ತಿದ್ದ. ತಾಯಿಯ ವಿಧವಾ ವೇತನ ಸೇರಿದರೂ ಒಂದು ಹೊತ್ತಿನ ಊಟ ಮಾತ್ರ ಸಾಧ್ಯವಾಗಿತ್ತು. ಅವರು ವಾಸವಿದ್ದ ಮನೆ ಮಣ್ಣಿನಲ್ಲಿ ಕಟ್ಟಿದ್ದು, ಮೇಲೆ ಹೆಂಚಿತ್ತು.

ವಿಜಯ್ ವಾಸ್ಕೋದ ಮನೆಯೊಂದರಲ್ಲಿ ಕೆಲಸಕ್ಕಿದ್ದ. ಜೋಯಿಡಾದ ವ್ಯಕ್ತಿಯೊಬ್ಬ ಅವನಿಗೆ ಈ ಕೆಲಸ ಏರ್ಪಾಡು ಮಾಡಿದ. ವಿಜಯ್‌ನ ಸಂಬಳ ತಿಂಗಳಿಗೆ ರೂ. 350 ಮಾತ್ರ. ಮನೆ ಮಾಲೀಕರು ಅವನಿಗೆ ಹಾಕಿಕೊಳ್ಳಲು ಹಳೆಯ ಬಟ್ಟೆಗಳನ್ನು ಕೊಟ್ಟರು. ಅವನು ನಸುಕಿನಲ್ಲೆದ್ದು ರಾತ್ರಿ ಹತ್ತರ ತನಕ ದುಡಿಯುತ್ತಿದ್ದ. ಮಗುವನ್ನು ಶಾಲೆಗೆ ಬಿಡುವುದು, ತೋಟ ನೋಡಿಕೊಳ್ಳುವುದು, ಅಂಗಡಿಯಿಂದ ಸಾಮಾನು ತರುವುದು, ಹಾಲು ವಿತರಣೆ ಮಾಡುವುದು ಅವನ ಕೆಲಸಗಳಾಗಿತ್ತು. ತಾಯಿ ಯಾವತ್ತೂ ಅವನನ್ನು ನೋಡಲು ಬರಲಿಲ್ಲ. ಕೆಲಸದ ಸ್ಥಿತಿ ಹೇಗಿದೆ ಎನ್ನುವುದರ ಬಗ್ಗೆ ಅವರಿಗೆ ಏನೂ ಗೊತ್ತಿರಲಿಲ್ಲ.

ವಿಜಯ್ ತನ್ನ ನೋವನ್ನು ಅಂಗಡಿ ಮಾಲೀಕರೊಂದಿಗೆ ಹಂಚಿಹೊಳ್ಳುತ್ತಲಿದ್ದ. ಶಿಕ್ಷಣ ಪಡೆಯಬೇಕೆನ್ನುವ ಹಂಬಲವನ್ನು ಅವರಲ್ಲಿ ಅವನು ಆಗಾಗ್ಗೆ ತೋಡಿಕೊಳ್ಳುತ್ತಿದ್ದ. ಅಂಗಡಿ ಮಾಲೀಕರು ಈ ವಿಚಾರವನ್ನು ವಾಸ್ಕೋದ ಅಂಗಡಿ ಮಾಲೀಕರ ಸಂಘದಲ್ಲಿ ಮಂಡಿಸಿದರು. ಬಾಲಕನ ಶಿಕ್ಷಣದ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಸಂಘ ತೀರ್ಮಾನಿಸಿತು. ನಂತರ ಮನೆ ಮಾಲೀಕರನ್ನು ಕರೆಸಿ ಸದಸ್ಯರು ಚರ್ಚೆ ನಡೆಸಿದರು. ವಿಜಯ್‌ನ ಶಿಕ್ಷಣಕ್ಕೆ ಅವರು ಪೂರಕವಾಗಿಯೇ ಸ್ಪಂದಿಸಿದರು. ವಾಸ್ಕೋದ ಸರ್ಕಾರಿ ಶಾಲೆಗೆ ಸೇರಿದ ಅವನಿಗೆ ಸಮಾಜ ಕಲ್ಯಾಣ ಇಲಾಖೆಯ ವಸತಿಗೃಹದಲ್ಲಿ ಪ್ರವೇಶವೂ ಸಿಕ್ಕಿತು. ಪ್ರತಿ ತಿಂಗಳು ಅವನಿಗೆ ರೂ. 300 ಸ್ಕಾಲರ್‌ಶಿಪ್ ನೀಡಲು ಅಂಗಡಿ ಮಾಲೀಕರ ಸಂಘ ತೀರ್ಮಾನಿಸಿತು.



# ಅಧ್ಯಾಯ 6
# ಕೆಲವು ಮುಖ್ಯ ಸಂಪರ್ಕಗಳು

18 ವರ್ಷದೊಳಗಿನ, ಸಂಕಷ್ಟಕ್ಕೊಳಗಾದ ಮಕ್ಕಳ ಪುನರ್ವಸತಿಯಲ್ಲಿ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಗಳು ಮಹತ್ವಪೂರ್ಣವಾದ ಪಾತ್ರ ವಹಿಸುತ್ತಿವೆ. ಬಾಲಕಾರ್ಮಿಕರು, ಕಿರುಕುಳ / ಹಿಂಸೆಗೊಳಗಾದವರು, ಸಾಗಾಣೆಗೊಳಪಟ್ಟವರು, ವಿಭಕ್ತ ಕುಟುಂಬದ ಮಕ್ಕಳು, ತ್ಯಜಿಸಲ್ಪಟ್ಟ ಮಕ್ಕಳು, ಮನೆ ಬಿಟ್ಟು ಓಡಿ ಬಂದ ಮಕ್ಕಳು, ಭಿಕ್ಷಾಟನೆಯಲ್ಲಿ ತೊಡಗಿದವರು ಮುಂತಾದ ಮಕ್ಕಳನ್ನು ಗುರುತಿಸಿ ಸಮಿತಿಯು ಪುನರ್ವಸತಿ ಮತ್ತು ಶಿಕ್ಷಣದ ವ್ಯವಸ್ಥೆಯನ್ನು ಕಲ್ಪಿಸುತ್ತದೆ. ಇಂತಹ ಮಕ್ಕಳನ್ನು ಕಂಡುಬಂದರೆ ನಾಗರಿಕ ಸಂಘ ಸಂಸ್ಥೆಗಳು ಆಯಾ ಜಿಲ್ಲೆಯ ಸಮಿತಿಯನ್ನು ಸಂಪರ್ಕಿಸಬಹುದು. ಇದಲ್ಲದೆ, ಯುನಿಸೆಫ್ ಮತ್ತು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಓ)ಗಳ ನೆರವಿನಿಂದ ನಡೆಯುತ್ತಿರುವ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ಯೋಜನೆಗಳು ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಜಾರಿಯಲ್ಲಿವೆ. ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬಾಲಕಾರ್ಮಿಕ ಯೋಜನಾ ಸೊಸೈಟಿಗಳು ಕೂಡ ಕಾರ್ಯ ಪ್ರವೃತ್ತವಾಗಿವೆ. ಬಾಲಕಾರ್ಮಿಕರ ಪುನರ್ವಸತಿಗಾಗಿ ಇವರನ್ನೂ ಸಂಪರ್ಕಿಸಬಹುದು.

## ಕರ್ನಾಟಕದ ಮಕ್ಕಳ ಕಲ್ಯಾಣ ಸಮಿತಿಗಳ ಸಂಪರ್ಕ ವಿವರಗಳು

| ಕ್ರ. ಸಂ. | ಜಿಲ್ಲೆ | ಸಂಪರ್ಕ ವಿವರ |
| --- | --- | --- |
| 1 | ದಕ್ಷಿಣ ಕನ್ನಡ | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ,<br>ಸರ್ಕಾರಿ ವೀಕ್ಷಣಾಲಯ, ಬೊಂದೆಲ್,<br>ಮಹಿಳಾ ಬಹುತಾಂತ್ರಿಕ ವಿದ್ಯಾಲಯದ ಹಿಂಬಾಗ,<br>ಮಿರಾಕುಲ್ ಗ್ರಾಮ, ಮಂಗಳೂರು.<br>ದೂ. 0824–2485401 |
| 2 | ಬೆಂಗಳೂರು ನಗರ | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ (ಸಂಖ್ಯೆ 1)<br>ಬೆಂಗಳೂರು ನಗರ ಸರ್ಕಾರಿ ಬಾಲಕರ<br>ಬಾಲಮಂದಿರ, ಹೊಸೂರು ರಸ್ತೆ,<br>ಬೆಂಗಳೂರು – 560 029.<br>ದೂ. 080–26561226 |
| 3 | ಬೆಂಗಳೂರು ನಗರ | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ (ಸಂಖ್ಯೆ 2)<br>ಬೆಂಗಳೂರು ನಗರ ಸರ್ಕಾರಿ ಬಾಲಕರ<br>ಬಾಲಮಂದಿರ, ಹೊಸೂರು ರಸ್ತೆ,<br>ಬೆಂಗಳೂರು – 560 029.<br>ದೂ. 080–26561226 |
| 4 | ಬಾಗಲಕೋಟೆ | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಬಾಲಕರ ಬಾಲಮಂದಿರ, ಸೆಕ್ಟರ್ ನಂ. 5,<br>ನವನಗರ, ರಾಯಚೂರು–ಬೆಳಗಾವಿ ಬೈಪಾಸ್ ರಸ್ತೆ,<br>ಆರ್.ಟಿ.ಓ. ಕಛೇರಿ ಹತ್ತಿರ,<br>ಬಾಗಲಕೋಟೆ – 587 102.<br>ದೂ. 08354–200401 |
| 5 | ಬಳ್ಳಾರಿ | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಬಾಲಕರ ಬಾಲಮಂದಿರ,<br>ಕಂಟೋನ್‌ಮೆಂಟ್, ಬಳ್ಳಾರಿ – 583 101.<br>ದೂ. 08392–242065 |

| | | |
|---|---|---|
| 6 | ಬೆಳಗಾವಿ | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಬಾಲಕರ ಬಾಲಮಂದಿರ, ಶಿವಾಜಿನಗರ,<br>ಬೆಳಗಾವಿ – 590 002.<br>ದೂ. 0831–2470785 |
| 7 | ವಿಜಾಪುರ | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಹಿರಿಯ ಬಾಲಕರ ಬಾಲಮಂದಿರ,<br>ಮನಗುಳಿ ರಸ್ತೆ, ಬಿಜಾಪುರ – 580 101.<br>ದೂ. 08352–277126 |
| 8 | ಬೀದರ್ | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಬಾಲಕರ ಬಾಲಮಂದಿರ,<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,<br>ಮೈಲೂರು, ಬೀದರ್ – 5855 403.<br>ದೂ. 08482–225714 |
| 9 | ಚಿತ್ರದುರ್ಗ | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಬಾಲಕರ ಬಾಲಮಂದಿರ,<br>ಅಯ್ಯಪ್ಪಸ್ವಾಮಿ ದೇವಾಸ್ಥಾನ ರಸ್ತೆ, 1ನೇ ಕ್ರಾಸ್,<br>ಮಿತ್ರ ಬಡಾವಣೆ, ಚಿತ್ರದುರ್ಗ – 577 501.<br>ದೂ. 08194–22462 / 2220538 |
| 10 | ದಾವಣಗೆರೆ | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಬಾಲಕರ ಬಾಲಮಂದಿರ,<br>ವಾಟರ್ ಟ್ಯಾಂಕ್ ಎದುರು, ಪಿ. ಜೆ. ಬಡಾವಣೆ,<br>ದಾವಣಗೆರೆ – 577 004.<br>ದೂ. 08192–260618 |
| 11 | ಗದಗ | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಬಾಲಕರ ಬಾಲಮಂದಿರ (ಹಿರಿಯ),<br>ಪಾಲ್ ಬಾದಾಮಿ ರಸ್ತೆ, ಎಸ್‌ಬಿಐ ಶಾಖೆ ಎದುರು,<br>ಬೆಟ್ಟಗೇರಿ, ಗದಗ – 582 101.<br>ದೂ. 08372–2546344 |


| | | |
|---|---|---|
| 12 | **ಗುಲ್ಬರ್ಗ** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಬಾಲಕರ ಬಾಲಮಂದಿರ,<br>ಸುರಬಾಗ್ ದರ್ಗಾ ರಸ್ತೆ, ಗುಲ್ಬರ್ಗಾ – 585 102.<br>ಮತ್ತು ಬಾಲಕಿಯರ ಬಾಲ ಮಂದಿರ, ಅಳಂದ ರಸ್ತೆ,<br>ಗುಲ್ಬರ್ಗ –585 102.<br>ದೂ. 08472–244756 / 269438 |
| 13 | **ಹಾಸನ** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಬಾಲಕರ ಬಾಲಮಂದಿರ,<br>ಪಾರ್ಕ್ ರಸ್ತೆ, ಹಾಸನ – 573 201<br>ದೂ. 08172 – 268754 |
| 14 | **ಧಾರವಾಡ** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಹಿರಿಯ ಬಾಲಕರ ಬಾಲಮಂದಿರ,<br>ಹಳೇ ವೀಕ್ಷಣಾಲಯ ಕಟ್ಟಡ,<br>ಉಣಕಲ್ ಕ್ರಾಸ್, ಹುಬ್ಬಳ್ಳಿ – 580 031.<br>ದೂ. 0836 –2372061 |
| 15 | **ಕೋಲಾರ** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಬಾಲಕರ ಬಾಲಮಂದಿರ, ಮೆಸ್ಕಾಂ ರಸ್ತೆ,<br>ಅಂಡರ್‌ಸನ್ ಪೇಟೆ, ಕೆ.ಜಿ.ಎಫ್. – 563 601.<br>ದೂ. 08153 – 274634 |
| 16 | **ಕೊಪ್ಪಳ** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಕಿರಿಯ ಬಾಲಕರ ಬಾಲಮಂದಿರ,<br>ಬನ್ನಿಕಟ್ಟಿ ಹತಿರ, ಗದಗ ರಸ್ತೆ, ಕೊಪ್ಪಳ – 583 131.<br>ದೂ. 08539 – 231525 |
| 17 | **ಮೈಸೂರು** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಬಾಲಕಿಯರ ಬಾಲಮಂದಿರ, ಚಿಕ್ಕರಮನೆ,<br>ಲಲಿತ ಮಹಲ್ ರಸ್ತೆ, ಮೈಸೂರು – 570 011.<br>ದೂ. 0821 –2472576 |

| | |
|---|---|
| **18 ಕೊಡಗು** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಬಾಲಕರ ಬಾಲಮಂದಿರ,<br>ಹೊಸ ಬಡಾವಣೆ, ಮಡಿಕೇರಿ – 571 201.<br>ದೂ. 08272 – 228220 |
| **19 ಮಂಡ್ಯ** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಬಾಲಕರ ಬಾಲಮಂದಿರ,<br>ಮರಿಗೌಡ ಬಡಾವಣೆ, ಜಿಲ್ಲಾ ಕಾರಾಗೃಹ ಹತ್ತಿರ,<br>ಮಂಡ್ಯ – 571 401.<br>ದೂ. 08232 – 220743 |
| **20 ರಾಯಚೂರು** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಬಾಲಕಿಯರ ಬಾಲಮಂದಿರ,<br>ಹಿಮಗಿರಿ ಕಾಂಪ್ಲೆಕ್ಸ್, ರೈಲ್ವೇ ಸ್ಟೇಶನ್ ಏರಿಯಾ,<br>ರಾಯಚೂರು – 584 101.<br>ದೂ. |
| **21 ಹಾವೇರಿ** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>ಸರ್ಕಾರಿ ಬಾಲಕರ ಬಾಲಮಂದಿರ,<br>ರಾಣಿಬೆನ್ನೂರು –581 115.<br>ದೂ. 08373–266289 |
| **22 ಚಾಮರಾಜನಗರ** | **ಅಧ್ಯಕ್ಷರು ಮತ್ತು ಸದಸ್ಯರು**<br>ಬಾಲಕಿಯರ ಬಾಲಮಂದಿರ<br>ಹೌಸಿಂಗ್ ಬೋರ್ಡ್ ಕಾಲನಿ,<br>ಜೆ.ಎಸ್.ಎಸ್. ಬಾಲಕಿಯರ ಪ್ರೌಢಶಾಲೆ,<br>ಚಾಮರಾಜನಗರ – 571 313.<br>ದೂ. 08226 – 225711 |
| **23 ಉತ್ತರ ಕನ್ನಡ** | **ಅಧ್ಯಕ್ಷರು ಮತ್ತು ಸದಸ್ಯರು**<br>ಬಾಲಕಿಯರ ಬಾಲಮಂದಿರ,<br>ಕಾರವಾರ – 581 301.<br>ದೂ. 08382 – 226501 |

| | | |
|---|---|---|
| 24 | **ಉಡುಪಿ** | **ಅಧ್ಯಕ್ಷರು ಮತ್ತು ಸದಸ್ಯರು**<br>ಬಾಲಕಿಯರ ಬಾಲಮಂದಿರ<br>ಕಿತ್ತೂರು ರಸ್ತೆ, ಉಡುಪಿ. |
| 25 | **ರಾಮನಗರ** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>C/o ಉಪನಿರ್ದೇಶಕರ ಕಛೇರಿ<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,<br>ಹೊನ್ನಮ್ಮ ಕಲ್ಯಾಣ ಮಂಟಪದ ಹಿಂಬಾಗ,<br>ರಾಮನಗರ.<br>ದೂ. 080–27273036 |
| 26 | **ಚಿಕ್ಕಬಳ್ಳಾಪುರ** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>C/o ಉಪನಿರ್ದೇಶಕರ ಕಛೇರಿ<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>ಟಿಎಪಿಸಿಎಮ್‌ಎಸ್ ಕಟ್ಟಡ, 1 ನೇ ಮಹಡಿ,<br>ಕೆನರಾ ಬ್ಯಾಂಕ್ ಮುಂಬಾಗ,<br>ಬಿ. ಬಿ. ರಸ್ತೆ, ಚಿಕ್ಕಬಳ್ಳಾಪುರ.<br>ದೂ. 08156 – 270808 |
| 27 | **ಬೆಂಗಳೂರು ಗ್ರಾಮಾಂತರ** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>C/o ಉಪನಿರ್ದೇಶಕರ ಕಛೇರಿ<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>ನಂ.5, 3 ನೇ ಮಹಡಿ. ಬಿ. ಆರ್. ಪ್ಲಾಜಾ,<br>ವಾಟಾಳ್‌ನಾಗರಾಜ್ ರಸ್ತೆ, ಓಕುಳಿಪುರಂ,<br>ಬೆಂಗಳೂರು – 560 021.<br>ದೂ. 080 – 23522176 |
| 28 | **ಚಿಕ್ಕಮಗಳೂರು** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>C/o ಉಪನಿರ್ದೇಶಕರ ಕಛೇರಿ<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>ಚಿಕ್ಕಮಗಳೂರು.<br>ದೂ. 08262 – 220930 |

| | | |
|---|---|---|
| **29** | **ಯಾದಗಿರಿ** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>C/o ಉಪನಿರ್ದೇಶಕರ ಕಛೇರಿ<br>ಉಪನಿರ್ದೇಶಕರ ಕಛೇರಿ<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>ಯಾದಗಿರಿ.<br>ದೂ. 08473 – 253739 |
| **30** | **ತುಮಕೂರು** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>C/o ಉಪನಿರ್ದೇಶಕರ ಕಛೇರಿ<br>ಸರ್ಕಾರಿ ಬಾಲಕಿಯರ ಬಾಲಮಂದಿರ,<br>ಅಮರಜ್ಯೋತಿನಗರ, ವಾರ್ಡ್ ಸಂ. 29,<br>ಕುಣಿಗಲ್ ರಸ್ತೆ, ತುಮಕೂರು – 572 104.<br>ದೂ. 0816 – 2201006 |
| **31** | **ಶಿವಮೊಗ್ಗ** | **ಅಧ್ಯಕ್ಷರು ಮತ್ತು ಸದಸ್ಯರು**<br>ಮಕ್ಕಳ ಕಲ್ಯಾಣ ಸಮಿತಿ<br>C/o ಉಪನಿರ್ದೇಶಕರ ಕಛೇರಿ<br>ಸರ್ಕಾರಿ ಬಾಲಕರ ಬಾಲಮಂದಿರ,<br>ಹಾಲುಕೊಳ, ನೂರಡಿ ರಸ್ತೆ,<br>ಶಿವಮೊಗ್ಗ – 577 204.<br>ದೂ. 08182 – 251511 |

ಮಕ್ಕಳ ಕಲ್ಯಾಣ ಸಮಿತಿಯ ಕಾರ್ಯ ನಿರ್ವಹಣಾ ಸ್ಥಳ, ಸಂಪರ್ಕ ವಿವರಗಳು ಬದಲಾಗುವ ಸಾಧ್ಯತೆಗಳಿದ್ದು, ಅಂತಹ ಸಂದರ್ಭದಲ್ಲಿ ವಿವರಗಳಿಗಾಗಿ, ಸಂಬಂಧಿಸಿದ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಛೇರಿಯನ್ನು ಸಂಪರ್ಕಿಸಬಹುದು. ಈ ವಿವರಗಳು ಇಲಾಖೆಯ ಜಿಲ್ಲಾ ಉಪನಿರ್ದೇಶಕರು / ಸಹಾಯ ನಿರ್ದೇಶಕರು / ಚೈಲ್ಡ್ ಲೈನ್ (ಮಕ್ಕಳ ಸಹಾಯವಾಣಿ) ಅಥವಾ ಬಾಲಮಂದಿರಗಳ ಅಧೀಕ್ಷರುಗಳಲ್ಲಿ ದೊರೆಯುತವೆ, ತಾಲ್ಲೂಕು / ಬ್ಲಾಕ್ ಹಂತದಲ್ಲಿ ಇಲಾಖೆಯ ಶಿಶು ಅಭಿವೃದ್ಧಿ ಅಧಿಕಾರಿಗಳು, ಅಥವಾ ಗ್ರಾಮ ಮಟ್ಟದಲ್ಲಿ ಅಂಗನವಾಡಿ ಕಾರ್ಯಕರ್ತೆಯರನ್ನು ಸಂಪರ್ಕಿಸಿ ಇಲಾಖಾ ಸಂಪರ್ಕ ವಿವರವನ್ನು ಪಡೆಯಬಹುದು.



## ಜಿಲ್ಲಾವಾರು ಮಕ್ಕಳ ಕಲ್ಯಾಣ ಸಮಿತಿಗಳ ಸಂಪರ್ಕ ವಿವರ

| ಜಿಲ್ಲೆ | ವಿಳಾಸ | ದೂರವಾಣಿ |
|---|---|---|
| ಬೀದರ | ಬಾಲಕರ ಬಾಲಮಂದಿರ, ಮೈಲೂರು ರಸ್ತೆ,<br>ಲ್ಯಾಂಡ್ ಆರ್ಮಿ, ಬೀದರ – 585 403. | 08482225714<br>9242728068 |
| ಗುಲಬರ್ಗಾ | ಹಿರಿಯ ಬಾಲಕರ ಬಾಲಮಂದಿರ,<br>ಸುರಬಾಗ್‌ದರ್ಗಾ ರಸ್ತೆ, ಗುಲ್ಬರ್ಗಾ. | 9886561156 |
| ಕೊಪ್ಪಳ | ಬಾಲಮಂದಿರ, ಇಂದ್ರಕಿಲಾ ನಗರ,<br>ಗದಗ ರಸ್ತೆ, ಕೊಪ್ಪಳ. | 9845847355 |
| ಬಾಗಲಕೋಟೆ | ಬಾಲಕರ ಬಾಲಮಂದಿರ, ಕಂಟೋನ್‌ಮೆಂಟ್<br>ಏರಿಯಾ, ಬಳ್ಳಾರಿ – 583 104. | 08392 242065 |
| ಹಾವೇರಿ | ಬಾಲಕರ ಬಾಲಮಂದಿರ, ಹೊಸ ನಗರ,<br>ರಾಣಿಬೆನ್ನೂರು, ಹಾವೇರಿ – 581 115. | 08373 266289 |
| ಗದಗ | ಬಾಲಕರ ಬಾಲಮಂದಿರ, ಬೆಟ್ಟಗಿರಿ,<br>ಗದಗ – 01. | 08372 246344 |
| ರಾಯಚೂರು | ಬಾಲಕರ ಬಾಲಮಂದಿರ, ಹಿಮಗಿರಿ ಕಾಂಪ್ಲೆಕ್ಸ್,<br>ಸ್ಟೇಶನ್ ಏರಿಯಾ, ರಾಯಚೂರು – 584 101. | 08532 250010 |
| ಬಿಜಾಪುರ | ಬಾಲಕರ ಬಾಲಮಂದಿರ, ಮನುಗುಳಿ ರಸ್ತೆ,<br>ಬಿಜಾಪುರ – 586 109. | 08352 277126 |
| ಬಳ್ಳಾರಿ | ಬಾಲಕರ ಬಾಲಮಂದಿರ (ಸೀನಿಯರ್),<br>ಕಂಟೋನ್ಮೆಂಟ್ ಏರಿಯಾ,<br>ಬಳ್ಳಾರಿ – 583 104. | 08392 242065 |
| ಚಿತ್ರದುರ್ಗ | 1ನೇ ಕ್ರಾಸ್, ಮಿತ್ರ ಬಡಾವಣೆ, ಅಯ್ಯಪ್ಪ<br>ದೇವಸ್ಥಾನ ಹತ್ತಿರ, ಚಿತ್ರದುರ್ಗ – 577 501. | 08194 224768<br>9448135944 |

| | | |
|---|---|---|
| **ತುಮಕೂರು** | ಸರ್ಕಾರಿ ಬಾಲಕಿಯರ ಬಾಲಮಂದಿರ, ಹೇಮಾವತಿ ಕಛೇರಿ ಹತ್ತಿರ, ಅಮರಜ್ಯೋತಿ ನಗರ, ಕುಣಿಗಲ್ ರಸ್ತೆ, ತುಮಕೂರು – 05. | 08162 214703 |
| **ದಾವಣಗೆರೆ** | ಬಾಲಕರ ಬಾಲಮಂದಿರ, ಬಾಬುಜಿ ಪ್ರೌಢಶಾಲೆ ಹಿಂಭಾಗ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ – 577 004. | 08192 221471 |
| **ಹುಬ್ಬಳ್ಳಿ – ಧಾರವಾಡ** | ಬಾಲಮಂದಿರ, ಬೆಂಡಿಗೇರಿ ಪೊಲೀಸ್ ಠಾಣೆ ಹತ್ತಿರ, ಕ್ರಿಶ್ಚಿಯನ್ ಕಾಲೊನಿ, ಹುಬ್ಬಳ್ಳಿ – 20. | 0836 2744196 |
| **ಬೆಳಗಾವಿ** | ಉಪನಿರ್ದೇಶಕರ ಕಛೇರಿ, ಶಿವಾಜಿ ನಗರ, ರಿಮ್ಯಾಂಡ್ ಹೋಂ ಕಾಂಪೌಂಡ್, ಬೆಳಗಾವಿ – 16. | 0831 2407235<br>9448193220 |
| **ಉತ್ತರಕನ್ನಡ** | ಬಾಲಕರ ಬಾಲಮಂದಿರ, ಜೀವನ್ ಭೀಮಾ ನಿಗಮ ಕಛೇರಿ ಹತ್ತಿರ, ಪಿ.ಡಬ್ಲ್ಯೂ.ಡಿ. ರಸ್ತೆ, ಉತ್ತರ ಕನ್ನಡ – 581 401. | 08384 236520 |
| **ಕೋಲಾರ** | ಬಾಲಕರ ಬಾಲಮಂದಿರ, ಮುಸ್ಕಾನ್ ರಸ್ತೆ, ಆಂಡೇರ್‌ಸನ್ ಪೇಟ್, ಕೆಜಿಎಫ್ – 563 601. | 9945743004 |
| **ಹಾಸನ** | ಬಾಲಕರ ಬಾಲಮಂದಿರ, ಹರ್ಷಮಹಲ್ ರಸ್ತೆ, ವಿಜಯನಗರ, ಹಾಸನ – 573 201. | 08172 268754 |
| **ಶಿವಮೊಗ್ಗ** | ಬಾಲಕರ ಬಾಲಮಂದಿರ, ಹಲ್ಲುಕೊಳ್ಳ, ಸಾಗರ ರಸ್ತೆ, ಶಿವಮೊಗ್ಗ – 577 201. | 08182 251511 |
| **ಚಿಕ್ಕಮಗಳೂರು** | ಬಾಲಮಂದಿರ, ಹೌಸಿಂಗ್ ಬಾರ್ಡ್ ಕಾಲೊನಿ, ಜ್ಯೋತಿನಗರ ಅಂಚೆ, ಚಿಕ್ಕಮಗಳೂರು – 577 101. | 0826 2220025 |
| **ದಕ್ಷಿಣ ಕನ್ನಡ** | ಬಾಲಕರ ಬಾಲಮಂದಿರ, ಪಾಲಿಟೆಕ್ನಿಕ್ ಹಿಂದೆ, ಬೊಂಡೆಲ್, ಮರಳು ಗ್ರಾಮ, ಮಂಗಳೂರು. | 0824 2432682 |
| **ಉಡುಪಿ** | ಬಾಲಕಿಯರ ಬಾಲಮಂದಿರ, ಮಹಿಳಾ ನಿಲಯ, ಎನ್‌ಹೆಚ್ 17, ನಿಟ್ಟೂರು, ಉಡುಪಿ – 576 103. | 0820 2580220<br>9880406742 |
| **ಮೈಸೂರು** | ಬಾಲಕಿಯರ ಬಾಲಮಂದಿರ, ಚಿಕ್ಕರಮನೆ, ಲಲಿತ ಮಹಲ್ ರಸ್ತೆ, ಮೈಸೂರು – 570 011. | 0821 2472576 |

| | | |
|---|---|---|
| ಚಾಮರಾಜ ನಗರ | ಬಾಲಕರ ಬಾಲಮಂದಿರ, ಜೆಎಸ್‌ಎಸ್ ಐಟಿಐ ಕಾಲೇಜ್ ಹಿಂಬಾಗ, ಪಿ.ಡಬ್ಲ್ಯೂ.ಡಿ. ಹೌಸಿಂಗ್ ಬೋರ್ಡ್ ಕಾಲೊನಿ, ಚಾಮರಾಜನಗರ – 571 313. | 08226 224720 |
| ಮಂಡ್ಯ | ಬಾಲಕರ ಬಾಲಮಂದಿರ, ಶಾರದಾ ನಿಲಯ, 2ನೇ ಕ್ರಾಸ್, ಮರಿಗೌಡ ಬಡಾವಣೆ, ಮಂಡ್ಯ – 571 401. | 0822 3222074 |
| ಬೆಂಗಳೂರು ನಗರ | ಬಾಲಕರ ಬಾಲಮಂದಿರ, ಹೊಸೂರು ರಸ್ತೆ, ನಿಮ್ಹಾನ್ಸ್ ಆಸ್ಪತ್ರೆ ಹತ್ತಿರ, ಬೆಂಗಳೂರು – 560 029 | 080 26561226 |
| ಬೆಂಗಳೂರು ಗ್ರಾಮಾಂತರ | ಬಾಲಕಿಯರ ಬಾಲಮಂದಿರ, 2ನೇ ಕ್ರಾಸ್, ನಾಗರಬಾವಿ, ಬೆಂಗಳೂರು – 560 072. | 080 23214487 |

## ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳು

ಪ್ರತಿ ಜಿಲ್ಲೆಯಲ್ಲಿಯೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬಾಲಕಾರ್ಮಿಕ ಯೋಜನಾ ಸೊಸೈಟಿ ಕಾರ್ಯ ನಿರ್ವಹಿಸುತ್ತದೆ. ಈ ಸೊಸೈಟಿಗೆ ಒಬ್ಬ ಯೋಜನಾ ನಿರ್ದೇಶಕರು ನೇಮಕಗೊಂಡಿರುತ್ತಾರೆ. ಇದರ ಮೂಲಕ ಬಾಲಕಾರ್ಮಿಕರ ಪುನರ್ವಸತಿಗಾಗಿ ವಿಶೇಷ ಸೇತುಬಂಧ ಶಾಲೆಗಳನ್ನು ನಡೆಸಲಾಗುತ್ತದೆ. ಆಯಾ ಜಿಲ್ಲೆಗಳ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ ಕಛೇರಿ ಅಥವಾ ಜಿಲ್ಲಾ ಕಾರ್ಮಿಕ ಅಧಿಕಾರಿಯನ್ನು ಸಂಪರ್ಕಿಸಬಹುದು.

ಯುನಿಸೆಫ್ ಮುಂದಾಳತ್ವದಲ್ಲಿ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ಕಾರ್ಯಕ್ರಮಗಳು ತಳಮಟ್ಟದಲ್ಲಿ ನಡೆಯುತ್ತಿದ್ದು, ಅವುಗಳ ವಿಳಾಸವನ್ನು ಕೆಳಗೆ ಕೊಡಲಾಗಿದೆ:

* ಸಂಯೋಜಕರು, ಯುನಿಸೆಫ್ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ಯೋಜನೆ, ಜಿಲ್ಲಾಧಿಕಾರಿಗಳ ಕಛೇರಿ, ಗುಲಬರ್ಗಾ.
  ದೂರವಾಣಿ : 08472 256295
* ಸಂಯೋಜಕರು, ಯುನಿಸೆಫ್ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ಯೋಜನೆ, ಜಿಲ್ಲಾಧಿಕಾರಿಗಳ ಕಛೇರಿ, ದಾವಣಗೆರೆ.
  ದೂರವಾಣಿ : 08192 256459

* ಸಂಯೋಜಕರು, ಯುನಿಸೆಫ್ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ಯೋಜನೆ, ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು.
ದೂರವಾಣಿ : 08532 229011

* ಸಂಯೋಜಕರು, ಯುನಿಸೆಫ್ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ಯೋಜನೆ, ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ನಗರ.
ದೂರವಾಣಿ : 080–

* ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಓ) ಯ ಜಿಲ್ಲಾ ಮಟ್ಟದ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ಯೋಜನೆಯು ಬೀದರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಜಾರಿಯಲ್ಲಿದೆ.

* ಯೋಜನಾ ನಿರ್ದೇಶಕರು, ಎನ್‌ಸಿಎಲ್‌ಪಿ, ಕೊಠಡಿ ಸಂಖ್ಯೆ : 232, ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ.
ದೂರವಾಣಿ : 08226–222195.
ಇಮೇಲ್: ilochnagar@gmail.com

* ಯೋಜನಾ ನಿರ್ದೇಶಕರು, ಬಿಡಿಸಿಎಲ್‌ಆರ್‌ಎಸ್, ಜಿಲ್ಲಾಧಿಕಾರಿಗಳ ಕಛೇರಿ, ಬೀದರ. ದೂರವಾಣಿ : ಇಮೇಲ್ : ilobidar@gmail.com

> ಅಪಾಯಕಾರಿ ಉದ್ದಿಮೆಗಳಲ್ಲಿ ದುಡಿಯುವ ಲಕ್ಷಗಟ್ಟಲೆ ಮಕ್ಕಳ ಕುರಿತು ನಮ್ಮ ರಾಜಕಾರಣಿಗಳಲ್ಲಿ ಏನು ಉತ್ತರವಿದೆ ? ತಮ್ಮ ಉಪಸ್ಥಿತಿಯಲ್ಲಿ ಬಾಲ್ಯವಿವಾಹಗಳನ್ನು ನಡೆಸು ಇಂತಹವರಿಂದ ನಾವು ಏನನ್ನು ನಿರೀಕ್ಷಿಸಲು ಸಾಧ್ಯ ?
>
> **ಡಾ. ಆರ್. ಇಂದಿರಾ,**
> ಪ್ರಾಧ್ಯಾಪಕಿ ಮತ್ತು ಲೇಖಕಿ, ಮೈಸೂರು.

**ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ (ಸಿಎಸಿಎಲ್) – ಕರ್ನಾಟಕ** (ಪ್ರಸ್ತುತ ರಾಜ್ಯಮಟ್ಟದಲ್ಲಿ ಆಯ್ಕೆಯಾದವರ ವಿವರ)

☛ ರಾಜ್ಯ ಸಂಚಾಲಕರು : ಶ್ರೀಮತಿ ಸುಶೀಲ, ನಿರ್ದೇಶಕರು, ಸ್ಪಂದನ ಸಂಸ್ಥೆ, ಸಂ. 2436, ಸೆಕ್ಟರ್ 12, ಮಹಂತೇಶನಗರ, ಬೆಳಗಾವಿ – 590 016. ದೂರವಾಣಿ : 0831 4210749

ಇಮೇಲ್ : caclkarnataka@gmail.com

☛ ಉಪಸಂಚಾಲಕರು : ಶ್ರೀ ಮಹೇಶ್‌ಚಂದ್ರ ಗುರು, ನಿರ್ದೇಶಕರು, ವಿಕಸನ ಸಂಸ್ಥೆ, ಮಂಡ್ಯ. ದೂರವಾಣಿ : 9448464171.

☛ ಅಡ್ವೊಕಸಿ ಸಂಚಾಲಕರು : ಶ್ರೀ ಮ್ಯಾಥ್ಯೂಸ್ ಫಿಲಿಪ್, ನಿರ್ದೇಶಕರು, ಸಿಕ್ರಂ, ಅಂಜನಪ್ಪ ಕಾಂಪ್ಲೆಕ್ಸ್, ನಂ. 35, ಹೆಣ್ಣೂರು ರಸ್ತೆ, ಲಿಂಗರಾಜಪುರಂ, ಬೆಂಗಳೂರು – 560 084.

ದೂರವಾಣಿ: 08025473922. ಇಮೇಲ್ : contact@sichrem.org

ಬಾಲಕಾರ್ಮಿಕರ ಪುನರ್ವಸತಿಗಾಗಿ ರಾಜ್ಯದ ಹಲವು ಸಂಘ–ಸಂಸ್ಥೆಗಳು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ದಾನಿ ಸಂಸ್ಥೆಗಳು ಮತ್ತು ಸರ್ಕಾರದಿಂದ ನೆರವು ಪಡೆದು ಪುನರ್ವಸತಿ ಕೇಂದ್ರಗಳನ್ನು ನಡೆಸುತ್ತಿವೆ. ಅವುಗಳಲ್ಲಿ ಕೆಲವು ಸಂಪರ್ಕಗಳನ್ನು ಇಲ್ಲಿ ನೀಡಲಾಗಿದೆ.

- ನಮ್ಮನೆ, ಅಪ್ಸಾ, 34, ಅಣ್ಣಸಂದ್ರಪಾಳ್ಯ, ವಿಮಾನಪುರ, ಬೆಂಗಳೂರು – 560 042.
  ದೂರವಾಣಿ : 080 25230086 / 25232749
- ಬಾಸ್ಕೋ, 91–ಬಿ ಸ್ಟ್ರೀಟ್, 6ನೇ ಕ್ರಾಸ್, ಗಾಂಧಿನಗರ, ಬೆಂಗಳೂರು – 560 009.
  ದೂರವಾಣಿ : 080 26604770 / 26524138
- ರೆಡ್ಸ್, ಚಾಮಿನಾಡೆ ನಿಲಯ, 15, 16 ಕರ್ಲೀ ಸ್ಟ್ರೀಟ್, ಪಿ.ಬಿ. ನಂ. 25089, ರಿಚ್‌ಮಂಡ್ ಟೌನ್, ಬೆಂಗಳೂರು – 560 025.
  ದೂರವಾಣಿ : 080 22214247 / 22220008
- ಪ್ರಜ್ಞಾ ಕೌನ್ಸಿಲಿಂಗ್ ಸೆಂಟರ್, ಫಲ್ನೀರ್ ರಸ್ತೆ, ಕಂಕನಾಡಿ, ಮಂಗಳೂರು – 575 002. ದೂರವಾಣಿ : 0824 2432682.


- ಮಕ್ಕಳ ಮನೆ, ಡಾನ್ ಬಾಸ್ಕೊ, ಜಂಬುನಾಥ ರಸ್ತೆ, ಹೊಸಪೇಟೆ, ಬಳ್ಳಾರಿ ಜಿಲ್ಲೆ – 583 201. ದೂರವಾಣಿ : 08394 265161.
- ಆಶಾಕಿರಣ ಮತ್ತು ಆಶಾಭವನ, ಆರ್.ಎಲ್.ಹೆಚ್.ಪಿ., ಗಾಯತ್ರಿಪುರಂ, ಮೈಸೂರು. ದೂರವಾಣಿ : 0821 2451612.
- ಸಾಥಿ, ದೇಶಪಾಂಡೆ ನಗರ, ಹುಬ್ಬಳ್ಳಿ. ದೂರವಾಣಿ : 0836 2352433 ಮೊಬೈಲ್ : 9900979155
- ಗುಬ್ಬಚ್ಚಿ ಮಕ್ಕಳ ಮನೆ, ಕಿಡ್ಸ್, ಹಳೆ ತೇಗೂರು, ಧಾರವಾಡ. ದೂರವಾಣಿ : 9342730069
- ದೀನಬಂಧು ಸೇವಾ ಸಂಸ್ಥೆ, ರಾಮಸಮುದ್ರ, ಚಾಮರಾಜನಗರ. ದೂರವಾಣಿ : 08226 226007
- ಒಡನಾಡಿ ಸೇವಾ ಸಂಸ್ಥೆ, ಎಸ್.ಆರ್.ಎಸ್. ಕಾಲೋನಿ, ಹುಣಸೂರು ರಸ್ತೆ, ಮೈಸೂರು. ದೂರವಾಣಿ : 0821 240155
- ಪ್ರಚೋದನ, ಸೊಸೈಟಿ ಫಾರ್ ರೂರಲ್ ಅಂಡ್ ಅರ್ಬನ್ ಡೆವಲಪ್‌ಮೆಂಟ್, 1–4–1291/443, ಐ.ಡಿ.ಎಸ್.ಎಂ.ಟಿ. ಲೇ ಔಟ್, ರಾಯಚೂರು. ದೂರವಾಣಿ : 08532 228963, 230941

## ಆಕರಗಳು ಮತ್ತು ಸಂಪನ್ಮೂಲಗಳು


- ಸರ್ಕಾರಿ ಯೋಜನೆಗಳ ಮಾಹಿತಿ ಕೈಪಿಡಿ : ಪ್ರ : ಸಿವಿಕ್, ಬೆಂಗಳೂರು–2007.
- ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ : ಪ್ರ : ಭಾರತ ಸರ್ಕಾರ
- ಸಿಎಸಿಎಲ್ ಪ್ರಕಟಣೆಗಳು – 2004–05
- ಟ್ರೇಡ್ ಯೂನಿಯನ್ಸ್ ಆ್ಯಂಡ್ ಚೈಲ್ಡ್ ಲೇಬರ್ – ಎ ಗೈಡ್ ಟು ಆ್ಯಕ್ಷನ್ : ಪ್ರ : ಐಎಲ್‌ಓ – 2001
- ಸುಧಾ ವಾರಪತ್ರಿಕೆ, ಮೇ 5, 2005
- ಮಕ್ಕಳ ನ್ಯಾಯ ಕಾಯ್ದೆ ಏನು ? ಏಕೆ ? : ಜಿಯೋ ಡಿ'ಸಿಲ್ವಾ : ಪ್ರ : ಪಡಿ, ಮಂಗಳೂರು –2006

- ಚೈಲ್ಡ್ ಪ್ರೊಟೆಕ್ಷನ್ (ಫಾರ್ ಸ್ಕೂಲ್ ಟೀಚರ್ಸ್) : ಪ್ರ : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ನವದೆಹಲಿ – 2006
- ಚೈಲ್ಡ್ ಪ್ರೊಟೆಕ್ಷನ್ (ಫಾರ್ ಪಂಚಾಯ್ತ್ ಮೆಂಬರ್ಸ್) : ಪ್ರ : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ನವದೆಹಲಿ – 2006
- ಮಾಸ್ಟರ್ ಪ್ಲಾನ್ ಆಫ್ ಆಪರೇಶನ್ಸ್ 2003–2007 : ಪ್ರ : ಯುನಿಸೆಫ್ ಮತ್ತು ಭಾರತ ಸರ್ಕಾರ
- ಮಕ್ಕಳ ರಕ್ಷಕರು ನಾವು, ನೀವು ಮತ್ತು ಎಲ್ಲರೂ.
  ಲೇ : ವಾಸುದೇವ ಶರ್ಮಾ – 2005.
- ಸಾಥಿ ಸಂಸ್ಥೆ ವಾರ್ತಾಪತ್ರಿಕೆ – ಸಂ.1, ಸಂಚಿಕೆ 10
- ಹೆಜ್ಜೆಗಳು, ದಾವಣಗೆರೆಯ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ದಾವಣಗೆರೆಯಲ್ಲಿ ನಡೆದ ಅನುಬವಗಳ ದಾಖಲೆ, ಪ್ರ : ಕಾರ್ಮಿಕ ಇಲಾಖೆ ಮತ್ತು ಯುನಿಸೆಫ್ – 2006.
- ಸ್ವಸಹಾಯ ಸಂಘಗಳಿಂದ ಸಾಮಾಜಿಕ ಸಂವಹನ ಮತ್ತು ಸಾಂಘಿಕ ಅನುಸಂಧಾನ, (ಸ್ವಸಹಾಯ ಸಂಘಗಳಿಗೆ ತರಬೇತಿ ಕೈಪಿಡಿ), ಪ್ರ : ಐಎಲ್ಓ, ಬೆಂಗಳೂರು – 2007.
- Justice for Children, Handbook on implementing the Juvenile Justice System, Authors : Nina Nayak & Anuradha Saibaba, Child Fund India, Bangalore–2007
- Give me back my childhood, depositions in Public Hearing, CACL 2003.
- Handbook for the orientation of the stakeholders on the elimination of child labour. Ed. H.K.Halambi & Sanjiv Kumar, ILO.

- Childline Resource Directory -South, Childline India Foundation, Mumbai – 2006.
- Invisible slaves, SAACS, New Delhi –1996.
- ಮೀನಾ ಕಥೆಗಳು, ಪ್ರ : ಯುನಿಸೆಫ್
- ಏಕ್ ಥಾ ಬಚ್‌ಪನ್, ಸಾಕ್ಷ್ಯಚಿತ್ರ, ಹೆಚ್‌ಆರ್‌ಎಲ್‌ಎನ್, ನವದೆಹಲಿ.

**ಬಾಲಕಾರ್ಮಿಕ ಪದ್ಧತಿ ಮುಕ್ತ ದೇಶವನ್ನು ಕಟ್ಟೋಣ**

ಮಕ್ಕಳು ಶಿಕ್ಷಣ ಪಡೆಯುವ ಹಕ್ಕಿನಿಂದ ವಂಚಿತರಾಗಿ ಯಾವುದೇ ರೀತಿಯ ದುಡಿಮೆಯಲ್ಲಿ ತೊಡಗಿರಕೂಡದೆಂದು ನಮ್ಮ ರಾಷ್ಟ್ರ ದೃಢ ಪ್ರತಿಜ್ಞೆ ಮಾಡಿದೆ. ಈ ನಿಟ್ಟಿನಲ್ಲಿ ಒಂದು ಪ್ರಮುಖ ಹೆಜ್ಜೆಯೆಂಬಂತೆ ಪ್ರತಿಯೊಬ್ಬರೂ ಮಕ್ಕಳ ದುಡಿಮೆಯನ್ನು ನಿಲ್ಲಿಸಿ ಅವರು ಶಾಲೆಗೆ ಸೇರುವಂತೆ ಪ್ರೋತ್ಸಾಹಿಸಬೇಕೆಂದು ನಿಮ್ಮೆಲ್ಲರನ್ನು ಆಹ್ವಾನಿಸುತ್ತೇನೆ.

1986ರ ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆಯಡಿಯಲ್ಲಿ ನಿಷೇಧಿಸಲ್ಪಟ್ಟ ಉದ್ಯೋಗಗಳ ಪಟ್ಟಿಗೆ ಮನೆಗೆಲಸ, ಡಾಬಾ, ರೆಸ್ಟೊರೆಂಟ್, ಹೊಟೇಲ್, ಮೊಟೆಲ್, ಟೀ ಅಂಗಡಿ, ರಿಸಾರ್ಟ್ ಮತ್ತು ಮನರಂಜನಾ ಕೇಂದ್ರಗಳನ್ನು ಹೊಸ ಅಧಿನಿಯಮ ಮೂಲಕ ಸೇರಿಸಲಾಗಿದೆ. ಈ ಕಾನೂನನ್ನು ಉಲ್ಲಂಘಿಸಿದವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು. ದುಡಿಮೆಯಿಂದ ಬಿಡುಗಡೆಯಾಗುವ ಮಕ್ಕಳಿಗೆ ಶಿಕ್ಷಣ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಈ ಕಾನೂನನ್ನು ಜಾರಿಗೊಳಿಸುವ ಪ್ರಯತ್ನದಲ್ಲಿ ಭಾಗಿಗಳಾಗುವಂತೆ ಎಲ್ಲಾ ನಾಗರೀಕರು, ಜನಸಮುದಾಯ ವೇದಿಕೆಗಳು, ಸರಕಾರಿ ನೌಕರರು ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ನಾನು ಮನನ ಮಾಡುತ್ತಿದ್ದೇನೆ. ಬಾಲಕಾರ್ಮಿಕ ಪದ್ಧತಿ ಮುಕ್ತ ದೇಶವೊಂದನ್ನು ಕಟ್ಟುವ ನೈತಿಕ ಬಲವನ್ನು ನಾವು ಸೃಷ್ಟಿಸೋಣ ; ಆ ಮೂಲಕ ಮಕ್ಕಳಿಗೆ ತಮ್ಮ ಶಿಕ್ಷಣದ ಹಕ್ಕು ಪಡೆಯಲು ದಾರಿ ಮಾಡಿಕೊಳ್ಳೋಣ.

**ಶ್ರೀ ಮನಮೋಹನ ಸಿಂಗ್**
ಪ್ರಧಾನ ಮಂತ್ರಿಗಳು, ಭಾರತ ಸರ್ಕಾರ.
(10ನೇ ಅಕ್ಟೋಬರ್ 2006ರಂದು
ಸಂಸತ್ತಿನಲ್ಲಿ ಮಾಡಿದ ಘೋಷಣೆಯ ತುಣುಕು)